بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِهِ الْکَرِیْمِ    وَعَلٰی عَبْدِهِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 05

ಸಂಚಿಕೆ: 44–45

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

31 ಅಕ್ಟೋಬರ್, 07 ನವೆಂಬರ್ 2024, 31 ಅಖಾ, 07 ನಬುವ್ವತ್ 1403 ಹಿಜರಿ ಶಮ್ಸಿ, 27 ರಬೀಉಸ್ಸಾನಿ, 04 ಜಮಾದಿಉಲ್ ಅವ್ವಲ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاِنْ تَعُدُّوْا نِعْمَةَ اللّٰهِ لَا تُحْصُوْهَا ؕ اِنَّ اللّٰهَ لَغَفُوْرٌ رَّحِیْمٌ ○

**(ಅನ್ನಹಲ್: 19)**

**ಅಂದರೆ: ಅಲ್ಲಾಹನ ಅನುಗ್ರಹಗಳನ್ನು ನೀವು ಎಣಿಕೆ ಮಾಡಲಿಕ್ಕೆ ಪ್ರಯತ್ನಿಸಿದರೆ ಅವುಗಳನ್ನು ಎಣಿಕೆ ಮಾಡಲು ನಿಮ್ಮಿಂದ ಸಾಧ್ಯವಿಲ್ಲ. ದಿಟವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

**ಸುಳ್ಳು ಸಾಕ್ಷಿಯ ಮೂಲಕ ಇನ್ನೊಬ್ಬರ ಆಸ್ತಿಯನ್ನು ಪಡೆದುಕೊಳ್ಳುವ ವ್ಯಕ್ತಿಯು ಅಲ್ಲಾಹನನ್ನು ಎಂತಹ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ ಅಂದರೆ ಅಲ್ಲಾಹನು ಆತನಿಂದ ಬೇಸರಗೊಂಡಿರುವನು**

**(2416–17)** ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು: "ಯಾರು ಪ್ರಮಾಣ ವಚನ ಸ್ವೀಕರಿಸುತ್ತಾರೋ ಅವರು ಅದರಲ್ಲಿ ಸುಳ್ಳುಗನಾಗಿದ್ದರೆ, ಮತ್ತು ಇದರ ಮೂಲಕ ( ಪ್ರಮಾಣ) ಓರ್ವ ಮುಸಲ್ಮಾನನ ಆಸ್ತಿಯು ಪಡೆದುಕೊಂಡರೆ. ಆತನು ಅಲ್ಲಾಹನನ್ನು ಆತನ ಮೇಲೆ ಕೋಪಗೊಂಡಿದುವ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ. ಹಝ್ರತ್ ಅಶ್‌ಅಸ್(ರ) ಹೇಳುತ್ತಿದ್ದರು: ಅಲ್ಲಹನ ಆಣೆ!! ಈ ಮಾತನ್ನು ಹಝ್ರತ್ ಪೈಗಂಬರ್(ಸ) ರವರು ನನ್ನ ಬಗ್ಗೆಯೇ ಹೇಳಿರುವರು. (ಘಟನೆ ಹೀಗಿತ್ತು) ನನ್ನ ಮತ್ತು ಓರ್ವ ಯಹೂದಿಯ ಒಮದು ಭೂಮಿ ಇತ್ತು ಆತನು (ಯಹೂದಿ) ನನ್ನನ್ನು ಆ ಭೂಮಿಯಲ್ಲಿ ಹಖ್ಖಿಲ್ಲ ಎಂದು ನಿರಾಕರಿಸಿದನು. ಆದ್ದರಿಂದ ನಾನು ಹಝ್ರತ್ ಪೈಗಂಬರ್(ಸ) ರವರ ಬಳಿ ಹೋದಾರ ರಸೂಲುಲ್ಲಾಹ್(ಸ) ರವರು ನನಗೆ ಕೇಳಿದರು: ನಿಮ್ಮ ಬಳಿ ಏನಾದರೂ ಪುರಾವೆಗಳಿವೆಯೇ? ಅದಕ್ಕೆ ನಾನು ಹೇಳಿದೆ: ಇಲ್ಲ (ಹಝ್ರತ್ ಅಶ್‌ಅಸ್) ಹೇಳುತ್ತಿದ್ದರು: ನೀವು(ಸ) ಆ ಯಹೂದಿಗೆ ಪ್ರಮಾಣ ಮಾಡಿ ಹೇಳಲು ಹೇಳಿದರು. ಅದಕ್ಕೆ (ಹಝ್ರತ್ ಅಶ್‌ಅಸ್) ಹೇಳುತ್ತಾರೆ: ಯಾ ರಸೂಲಲ್ಲಾಹ್! ಅವನು ಪ್ರಮಾಣ ಮಾಡುತ್ತಾನೆ ಮತ್ತು ನನ್ನ ಸಂಪತ್ತು ಹೋಗುತ್ತದೆ, ಆಗ ಸರ್ವಶಕ್ತನಾದ ಅಲ್ಲಾಹನು ಈ ವಚನವನ್ನು ಅವತರಿಸಿದನು: ಅಲ್ಲಾಹನ ಒಪ್ಪಂದ ಮತ್ತು ಅವರ ಪ್ರಮಾಣಗಳಿಗೆ ಪ್ರತಿಯಾಗಿ ಸಣ್ಣ ಮೊತ್ತವನ್ನು ತೆಗೆದುಕೊಳ್ಳುವವರು. **(ಸಹೀಹ್ ಬುಖಾರಿ, ಸಂಪುಟ 4, ಕಿತಾಬ್ ಅಲ್–ಖುಸುಮಾತ್, 2008 ಖಾದಿಯಾನ್ ಪ್ರಕಟಿತ)**

ತನ್ನ ಜೀವನವನ್ನು ದೇವರಿಗೆ ಅರ್ಪಿಸುವವನು ನಿರ್ಗತಿಕನಾಗುವುದಿಲ್ಲ ಖಂಡಿತವಾಗಿಯೂ ನಿರ್ಗತಿಕನಾಗುವುದಿಲ್ಲ. ಬದಲು ಧರ್ಮ ಹಾಗೂ ದೇವನಿಗೆ ಸಮರ್ಪಿತನದ ಮನುಷ್ಯನು ಇನ್ನಷ್ಟು ಜಾಗೃತ ಹಾಗೂ ಚುರುಕು ಬುದ್ಧಿಯವನಗುತ್ತಾನೆ. ಬೇಸರವಾಗಲಿ ಉದಾಸೀನತೆಯಾಗಲೀ ಅವನ ಹತ್ತಿರ ಸುಳಿಯುವುದಿಲ್ಲ.

ನಮ್ಮ ಪ್ರವಾದಿ ಮುಹಮ್ಮದ್ (ಸ)ರು ಯಾವಾಗಲೂ ಉದಾಸೀನತೆಯಿಂದ ದೂರ ಉಲಿಯಬಯಸುತ್ತಿದ್ದರು, ನಾನು ಮತ್ತೊಮ್ಮೆ ಹೇಳುವೆನು ಉದಸೀನರಾಗಬೇಡಿರಿ.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಸರ್ವಶಕ್ತನಾದ ಅಲ್ಲಾಹನು ಹೀಗೆ ಪ್ರಾರ್ಥನೆಯನ್ನು ಕಲಿಸಿದನು **ರಬ್ಬನಾ ಆತಿನಾ ಫಿದ್ದುನಿಯಾ ಹಸನತೌಂ ವಫಿಲ್ ಆಖಿರತಿ ಹಸನತೌಂ ವಖಿನಾ ಅಝಾಬನ್ನಾರ್** (ಅಲ್ ಬುಖರ–202) ಈ ಪ್ರಾರ್ಥನೆಯಲ್ಲಿಯೂ ಲೌಕಿಕತೆಗೆ ಪ್ರಾದಾನ್ಯತೆ ನೀಡಲಾಗಿದೆ, ಆದರೆ ಯಾವ ಲೌಕಿಕತೆ? **ಹಸನತದ್ದುನಿಯಾ–**ವನ್ನು ಅದು ಪರಲೋಕಕ್ಕಾಗಿ ಹಿತಕಾರಿಯಾಗಿರಬೇಕು. ಈ ಪ್ರಾರ್ಥನೆಯಿಂದ ಸ್ಪಷ್ಟವಾಗುವುದೇನೆಂದರೆ ಸತ್ಯವಿಶ್ವಾಸಿಯೊಬ್ಬನಿಗೆ ಲೌಕಿಕತೆಯಲ್ಲಿ ಪರಲೋಕದ ಹಿತಚಿಂತನೆಯಿರಬೇಕು. ಮತ್ತು ಅದರ ಜೊತೆಯಲ್ಲೇ **ಹಸನತದ್ದುನಿಯಾ** ಪದದಲ್ಲಿ ಇಹಲೋಕದ ಎಲ್ಲಾ ಉತ್ತಮ ಮಾರ್ಗಗಳನ್ನು ಉಪಯೋಗಿಸಲು ನಿರ್ದೇಶನ ನೀಡಲಾಗಿದೆ. ಉತ್ತಮ ಮಾರ್ಗದಿಂದ ಅದನ್ನು ಹಿತವಾದ ರೀತಿಯಲ್ಲಿ ಇಹಜೀವನ ನಡೆಸಬಹುದು. ಬದಲು ಮಾನವರನ್ನು ದುಃಖಕ್ಕೆ ತಳ್ಳುವ ರೀತಿಯಲ್ಲಿ ಜೀವನ ನಡೆಸಕೂಡದು. ಆಗ ನಿಸ್ಸಂಶಯವಾಗಿಯೂ ಅದು ಪರಲೋಕದ ಹಿತಕ್ಕೂ ಕಾರಣವಾಗುತ್ತದೆ.

ಆದ್ದರಿಂದ ನೆನಪಿಡಿರಿ. ತನ್ನ ಜೀವನವನ್ನು ದೇವರಿಗೆ ಅರ್ಪಿಸುವವನು ನಿರ್ಗತಿಕನಾಗುವುದಿಲ್ಲ, ಖಂಡಿತವಾಗಿಯೂ ನಿರ್ಗತಿಕನಾಗುವುದಿಲ್ಲ. ಬದಲಿಗೆ ಧರ್ಮ ಹಾಗೂ ದೇವನಿಗೆ ಸಮರ್ಪಿತನಾದ ಮನುಷ್ಯನು ಇನ್ನಷ್ಟು ಜಾಗೃತ ಹಾಗೂ ಚುರುಕು ಬುದ್ಧಿಯುಳ್ಳನವಾಗುತ್ತಾನೆ. ಬೇಸರವಾಗಲಿ ಉದಾಸೀನತೆಯಾಗಲೀ ಅವನ ಹತ್ತಿರ ಸುಳಿಯುವುದಿಲ್ಲ ಹದೀಸಿನಲ್ಲಿದೆ. ಅಮ್ಮಾರ್ ಬಿನ್ ಖಝೀಮ ವರದಿ ಮಾಡುತ್ತಾರೆ. ಹಝ್ರತ್ ಉಮರ್(ರ) ಒಮ್ಮೆ ನನ್ನ ತಂದೆಯವರಿಗೆ ಹೇಳಿದರು. ನಿನಗೆ ಯಾವ ವಿಷಯವು ನೆಲದಲ್ಲಿ ಸಸ್ಯ ನೆಡಲು ತಡೆಹಿಡಿದಿದೆ. ಆಗ ನನ್ನ ತಂದೆ ಉತ್ತರಿಸಿದರು. ನಾನು ವೃದ್ಧನಾಗಿದ್ದೇನೆ. ನಾಳೆ ಸಾಯಬಹುದು. ಆಗ ಅವರಿಗೆ ಹಝ್ರತ್ ಉಮರ್(ರ) ಹೇಳಿದರು. ಹಾಗಾದರೆ ಅವಶ್ಯವಾಗಿ ನಿನಗೆ ಸಸ್ಯನೆಡಬೇಕಾಗಿದೆ. ನಾನು ಹಝ್ರತ್ ಉಮರ್ (ರ) ರನ್ನು ಅವರು ಸ್ವತಃ ನನ್ನ ತಂದೆಯವರ ಜೊತೆ ಒಳಗೂಡಿ ನಮ್ಮ ಭೂಮಿಯಲ್ಲಿ ಸಸ್ಯಗಳನ್ನು ನೆಡುತ್ತಿದ್ದದ್ದನ್ನು ನೋಡಿದೆ. ಅದೇ ರೀತಿ ನಮ್ಮ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಯಾವಾಗಲೂ ಉದಾಸೀನತೆಯಿಂದ ದೂರ ಉಳಿಯುತ್ತಿದ್ದರು. ನಾನು ಮತ್ತೊಮ್ಮೆ ಹೇಳುವೆನು, ಉದಾಸೀನರಾಗಬೇಡಿರಿ. ಅಲ್ಲಾಹನು ಸಂಸಾರ ಮಾಡಲು ತಡೆಯುವುದಿಲ್ಲ ಆದರೆ ಉತ್ತಮ ಸಂಸಾರಕ್ಕಾಗಿ ಪ್ರಾರ್ಥನೆಯ ಶಿಕ್ಷಣ ನೀಡುತ್ತಾನೆ. ಅಲ್ಲಾಹನು ಮನುಷ್ಯನು ಆಲಸಿಯಾಗಿ ಕುಳಿತುಕೊಳ್ಳುವುದು

***(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)***

## *129 ನೇ ಜಲ್ಸಾ ಸಾಲಾನ ಖಾದಿಯಾನ್*
## *27, 28, 29 ಡಿಸೆಂಬರ್ 2024ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

# ಖುತ್‌ಬ ಜುಮುಅ

ಹಝ್ರ‌ತ್ ಪೈಗಂಬರ್(ಸ)ರ ತ್ಯಾಗಶೀಲ ಸಹಾಬಿಯರ ನಿಷ್ಠೆಯ ಸ್ಥಿತಿಯು ಅದ್ಭುತಕರವಾಗಿತ್ತು. ಅವರು ಈ ರೀತಿಯಾಗಿ ಸ್ವತಃ ತಮ್ಮನ್ನು ಸಮರ್ಪಿಸುತ್ತಿದ್ದರು. ಮತ್ತೊಂದೆಡೆ ಹಝ್ರ‌ತ್ ಪೈಗಂಬರ್(ಸ) ತನ್ನ ಸ್ವಂತ ಜೀವಕ್ಕಿಂತ ಇತರರಿಗೆ ಆದ್ಯತೆ ನೀಡುತ್ತಿದ್ದರು. ಅವರು ಎಂತಹ ಧೈರ್ಯವಂತರು ಆಗಿದ್ದರು ಎಂದರೆ, ತನ್ನ ಜೀವದ ಚಿಂತೆ ಬಿಟ್ಟು ಅವರಿಗೆ ಮದೀನ ನಿವಾಸಿಗಳ ಚಿಂತೆಯಿತ್ತು. ಅದಕ್ಕಾಗಿ ಹೆಚ್ಚಾಗಿ ಸ್ವತಃ ಹಲವೆಡೆ ಇರುತ್ತಿದ್ದರು. ಕೆಲವೊಮ್ಮೆ ವಿಶ್ರಾಂತಿ ಪಡೆಯಲು ಡೇರೆಗೆ ಹೋಗುತ್ತಿರುವುದಾಗಿ ತೋರಿಬರುತ್ತಿತ್ತಾದರೂ ಅದರ ಹೆಚ್ಚಿನ ಭಾಗ ಅಲ್ಲಾಹನ ಮುಂದೆ ಸಾಷ್ಟಾಂಗ ಮಾಡಿಕೊಂಡು ದುಆ ಮಾಡುವುದಾಗಿ ಕಾಣಬಹುದಾಗಿತ್ತು.

**ಅಹ್‌ಝಾಬ್ ಯುದ್ಧದ ಸಂದರ್ಭದಲ್ಲಿ ಸಂಭವಿಸಿದ ಘಟನೆಗಳ ವಿವರಾತ್ಮಕ ಪ್ರಸ್ತಾವನೆ**

ಲಜ್ನಾ ಮತ್ತು ಅನ್ಸಾರ್‌ಗಳ ವಾರ್ಷಿಕ ಇಜ್‌ತಿಮಾಗಳ ಸಂದರ್ಭದಲ್ಲಿ ದುಆ ಹಾಗೂ ದರೂದ್ ಹೇಳುವುದರ ಕುರಿತು ಗಮನ ನೀಡಲು ಉಪದೇಶ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‌ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **27–09–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ನಾನು ಕಳೆದ ಖುತ್ಬದಲ್ಲಿ ಸೂಚಿಸಿದಂತೆ ಅಹ್‌ಝಾಬ್ ಯುದ್ಧದ ಸ್ಥಿತಿಗತಿಗಳ ಕುರಿತು ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಸಹ ಪ್ರಸ್ತಾಪಿಸಿರುವರು. ಅವರು ಹೇಳುತ್ತಾರೆ: ಮದೀನದ ಸಾಕಷ್ಟು ಭಾಗ ಕಂದಕದಿಂದ ಸುರಕ್ಷಿತವಾಗಿತ್ತು. ಇತರ ಕಡೆಗಳಲ್ಲಿ ಕೆಲವು ಬೆಟ್ಟಗಳು, ಕೆಲವು ಮನೆಗಳು ಮತ್ತು ಕೆಲವು ತೋಟಗಳು ಇದ್ದ ಕಾರಣದಿಂದ ದಿಢೀರನೆ ಹಲ್ಲೆ ನಡೆಸಲು ಶತ್ರುಸೇನೆಗೆ ಸಾಧ್ಯವಿರಲಿಲ್ಲ. ಆದ್ದರಿಂದ ಹೇಗಾದರೂ ಮದೀನದಲ್ಲಿ ಇರುವ ಯಹೂದಿ ಗೋತ್ರವಾದ ಬನೂ ಖುರೈಝ‌ವನ್ನು ತನ್ನ ಜೊತೆಗೆ ಸೇರಿಸಲು ಮತ್ತು ಆ ಮೂಲಕ ಮದೀನಕ್ಕೆ ತಲುಪುವ ಮಾರ್ಗವನ್ನು ತೆರೆಯಲು ಸತ್ಯನಿಷೇಧಿಗಳು ಸಮಾಲೋಚನೆ ನಡೆಸಿಕೊಂಡು ಯೋಜನೆ ಹಾಕಿದರು. ಸಮಾಲೋಚನೆಯ ನಂತರ ಬನೂ ಖುರೈಝ‌ ಗೋತ್ರವನ್ನು ಹೇಗಾದರು ತಮ್ಮ ಜೊತೆಗೆ ಸೇರಿಸಲಿಕ್ಕಾಗಿ ಪ್ರಯತ್ನಿಸಲು ಬನೂ ನಝೀರ್ ಗೋತ್ರದ ಸರದಾರ ಹುಯ್ಯ್ ಬಿನ್ ಅಖ್‌ತಬ್‌ನನ್ನು ಸತ್ಯನಿಷೇಧಿಗಳ ಸೈನ್ಯದ ಸರದಾರ ಅಬೂಸುಫ್ಯಾನ್ ನೇಮಿಸಿದನು. ಆದ್ದರಿಂದ ಹುಯ್ಯ್ ಬಿನ್ ಅಖ್ತಬ್ ಯಹೂದಿಗಳ ಕೋಟೆಗಳಿಗೆ ಹೋದನು ಮತ್ತು ಬನೂ ಖುರೈಝಾರ ಮುಖ್ಯಸ್ಥರನ್ನು ಭೇಟಿಯಾಗಲು ಬಯಸಿದನು. ಮೊದಲು ಬನೂ ಖುರೈಝ‌ದ ಸರದಾರರು ಜೊತೆ ಸೇರಲು ನಿರಾಕರಿಸಿದರು. ಆದರೆ ಈಗ ಈ ಸಮಯದಲ್ಲಿ ಎಲ್ಲಾ ಅರಬ್ಬರು ಮುಸ್ಲಿಮರನ್ನು ನಾಶಮಾಡಲು ಮುಂದಾಗಿದ್ದಾರೆ ಮತ್ತು ಈ ಪಟ್ಟಣವು ಇಡೀ ಅರಬ್ಬರನ್ನು ಯಾವುದೇ ರೀತಿಯಲ್ಲಿ ಎದುರಿಸಲು ಸಾಧ್ಯವಿಲ್ಲ ಈಗ ಮುಸ್ಲಿಮರ ವಿರುದ್ಧ ನಿಂತಿರುವ ಸೇನೆಯನ್ನು ಸೈನ್ಯ ಎಂದು ಕರೆಯಬಾರದು ಬದಲಿಗೆ ಒಂದು ಬೃಹತ್ತಾದ ಸಮುದ್ರದ ಎಂದು ಕರೆಯಬೇಕು ಎಂದು ಅವರಿಗೆ ವಿವರಿಸಿದಾಗ. ಈ ಮಾತುಗಳಿಂದ ಅವನು ಬನೂ ಖುರೈಝಾ ಅವರನ್ನು ಒಪ್ಪಂದವನ್ನು ಮುರಿಯಲು ಸಿದ್ಧರಾದರು. ಮತ್ತು ಸತ್ಯನಿಷೇಧಿಗಳ ಸೈನ್ಯವು ಮುಂಭಾಗದಿಂದ ಕಂದಕವನ್ನು ದಾಟಲು ಪ್ರಯತ್ನಿಸಬೇಕು ಹೀಗೆ ಅವರು ಕಂದಕವನ್ನು ದಾಟುವುದರಲ್ಲಿ ಯಶಸ್ವಿಯಾದಾಗ ಬನೂ ಖುರೈಝಾರವರು ಮದೀನಾದ ಇನ್ನೊಂದು ಕಡೆಯಿಂದ ಅಂದರೆ ಅಲ್ಲಿ ಮಹಿಳೆಯರುನ್ನು ಮತ್ತು ಮಕ್ಕಳನ್ನು ಬನೂ ಖುರೈಝಾರನ್ನು ನಂಬಿ ಯಾವುದೇ ರೀತಿಯ ರಕ್ಷಣೆಯಿಲ್ಲದೆ ಬಿಡಲಾಗಿದ್ದ ಭಾಗದಿಂದ ಹಲ್ಲೆ ಮಾಡುತ್ತಾರೆ ಹೀಗೆ ಮುಸ್ಲಿಮರ ಪೈಪೋಟಿಯ ಶಕ್ತಿ ಸಂಪೂರ್ಣ ನಜ್ಜುಗುಜ್ಜಾಗಲಿದೆ." ಅಲ್ಲಿಂದಲೇ ದಾಳಿ ನಡೆಸಬೇಕು. "ಮತ್ತು ತಕ್ಷಣವೇ ಮುಸ್ಲಿಂ ಪುರುಷರು, ಮಹಿಳೆಯರು ಮತ್ತು ಮಕ್ಕಳು ಎಲ್ಲರೂ ಕೊಲ್ಲಲ್ಪಡುತ್ತಾರೆ. ಈ ಯೋಜನೆಯಲ್ಲಿ ಸತ್ಯನಿಷೇಧಿಗಳು ಸ್ವಲ್ಪವಾದರೂ ಯಶಸ್ವಿಯಾಗುತ್ತಿದ್ದರೆ, ಮುಸ್ಲಿಮರಿಗೆ ಉಳಿದುಕೊಳ್ಳ ಯಾವುದೇ ಜಾಗವಿರುತ್ತಿರಲಿಲ್ಲ. ಬನೂ ಖುರೈಝ‌ ಗೋತ್ರ ಮುಸ್ಲಿಮರ ಮಿತ್ರ ಪಕ್ಷವಾಗಿತ್ತು. ಆ ಗೋತ್ರದವರು ಯುದ್ಧದಲ್ಲಿ ಭಾಗವಹಿಸದಿದ್ದರೂ ಶತ್ರುಗಳ ಕಡೆಯಲ್ಲಿ ನಿಂತುಕೊಂಡು ಮದೀನದ ಮೇಲೆ ದಾಳಿ ನಡೆಸಲಾರರು ಎಂಬ ಪ್ರತೀಕ್ಷೆ ಮುಸ್ಲಿಮರಿಗೆ ಇತ್ತು. ಇದೇ ಕಾರಣದಿಂದ ಅವರ ಕಡೆಯಿರುವ ಭಾಗವನ್ನು ಯಾವುದೇ ಸುರಕ್ಷೆಯಿಲ್ಲದೇ ಸಂಪೂರ್ಣವಾಗಿ ಬಿಡಲಾಗಿತ್ತು.

ಬನೂ ಖುರೈಝಾ ಮತ್ತು ಸತ್ಯನಿಷೇಧಿಗಳು ಸಹ ಈ ಪರಿಸ್ಥಿತಿಯನ್ನು ಅವಲೋಕಿಸಿ ಬನೂ ಖುರೈಝಾ ಅವರು ಸತ್ಯನಿಷೇಧಿಗಳೊಂದಿಗೆ ಸೇರಿಕೊಂಡರೆ, ಮುಸ್ಲಿಮರು ಮದೀನಾದ ಈ ಭಾಗವನ್ನು ಭದ್ರಗೊಳಿಸಿಕೊಳ್ಳಬಾರದು ಎಂದು ಅವರು ಬಹಿರಂಗವಾಗಿ ಸತ್ಯನಿಷೇಧಿಗಳನ್ನು ಸಹಾಯ ಮಾಡಬಾರದು ಎಂದು ಅವರು ನಿರ್ಧರಿಸಿದರು. ಈ ರೀತಿ ಅವರು ಬುದ್ಧಿವಂತಿಕೆ ತೋರಿದರು. "ಅದು ಬನೂ ಖುರೈಝಾರ ಪ್ರದೇಶಕ್ಕೆ ಸೇರುತ್ತಿತ್ತು." ಅಂದರೆ ಇಲ್ಲಿಂದ ಆಕ್ರಮಣ ಮಾಡಬಾರದು. ಈ ಯೋಚನೆ ಮುಸ್ಲಿಮರಿಗೆ ಬರಬಾರದು. "ಈ ತಂತ್ರವು ಬಹಳ ಅಪಾಯಕಾರಿಯಾಗಿತ್ತು. ಮುಸಲ್ಮಾನರಿಗೆ ಅರಿವಿಲ್ಲದಂತೆ, ಸತ್ಯನಿಷೇಧಿಗಳ ಸೇನೆಯು ಇಸ್ಲಾಮಿನ ಸೈನ್ಯದ ಮೇಲೆ ದಾಳಿ ನಡೆಸುತ್ತಿದ್ದ ಸಮಯದಲ್ಲಿ ಶತ್ರುಗಳೊಂದಿಗೆ ಸೇರಿಕೊಂಡು ಬನೂ ಖುರೈಝಾದ ಕೋಟೆಗಳಿರುವ ಮದೀನಾವನ್ನು ರಕ್ಷಿಸಲು ಅಸಾಧ್ಯವಾಗುತ್ತಿತ್ತು." (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–272–273) ಆದರೆ ಭದ್ರತೆ ಮಾತ್ರ ಅಸಾಧ್ಯವಾಗುತ್ತಿರಲಿಲ್ಲ. ಅದರ ಪ್ರಶ್ನೆಯೇ ಇರಲಿಲ್ಲ ಬದಲಿಗೆ ದಾಳಿಯ ಅಪಾಯವೂ ಹಚ್ಚಾಗಿತ್ತು.

ಆದಾಗ್ಯೂ, ಅಂತಹ ಸಮಯದಲ್ಲಿ ಬನೂ ಖುರೈಝ‌ ಗೋತ್ರ ಶತ್ರುಗಳ ಜೊತೆಗೆ ಸೇರಿಕೊಂಡಾಗ ಮದೀನದ ಮೇಲೆ ದಾಳಿಯ ಅಪಾಯ ಇನ್ನಷ್ಟು ವರ್ಧಿಸಿತು. ಹೇಗಿದ್ದರೂ ಇಂತಹ ಸ್ಥಿತಿಯಲ್ಲಿ ಮುಸ್ಲಿಮರ ಚಿಂತೆ ಸಹಜವಾಗಿತ್ತು. ಅದನ್ನು ತಡೆಯಲು ಪ್ರಯತ್ನ ಮಾಡುವುದು ಅಗತ್ಯವಾಗಿತ್ತು. ಆದ್ದರಿಂದ ಹಝ್ರ‌ತ್ ಪೈಗಂಬರ್(ಸ) ಐನೂರು ವ್ಯಕ್ತಿಗಳನ್ನು ನೇಮಿಸಲು ತೀರ್ಮಾನ ಮಾಡಿದರು. ಜೀವನಚರಿತ್ರೆಕಾರರು ಇದನ್ನು ಈ ಕೆಳಗಿನಂತೆ ವಿವರಿಸಿದ್ದಾರೆ: ಬನೂ ಖುರೈಝಾ ಅವರ ಒಪ್ಪಂದದ ಉಲ್ಲಂಘನೆಯ ಸುದ್ದಿ ಮುಸ್ಲಿಮರಿಗೆ ತಲುಪಿದಾಗ, ಅವರ ಭಯವು ಹೆಚ್ಚಾಯಿತು, ಅವರು ಮಹಿಳೆಯರು ಮತ್ತು ಮಕ್ಕಳ ಬಗ್ಗೆ ಚಿಂತಿಸಲಾರಂಭಿಸಿದರು ಮತ್ತು ಸರ್ವಶಕ್ತನಾದ ಅಲ್ಲಾಹನು ಹೇಳಿದಂತೆಯೇ ಮುಸ್ಲಿಮರ ಸ್ಥಿತಿಯಾಯಿತು **ಇಝ್ ಜಾಊಕುಮ್ ಮಿನ್ ಫೌಖಿಕುಮ್ ವಮಿನ್ ಅಸ್‌ಫಲ ಮಿಂಕುಮ್ ವ ಇಝ್ ಝಾಗತಿಲ್ ಅಬ್ಸಾರು ವ ಬಲಗ‌ತಿಲ್ ಖುಲೂಬುಲ್‌ಹನಾಜಿರ ವ ತಝುನ್ನೂನ ಬಿಲ್ಲಾಹಿಝ್ಝುನೂನಾ** (ಅಲ್–ಅಹ್‌ಝಾಬ್: 11) ಅಂದರೆ ಅವರು ನಿಮ್ಮನ್ನು ಮೇಲ್ಭಾಗದಿಂದಲೂ ಕೆಳಭಾಗದಿಂದಲೂ ಸುತ್ತುವರಿದು ಬಂದ ಸಂದರ್ಭದಲ್ಲಿ! ಆಗ ನಿಮ್ಮ ಕಣ್ಣುಗಳು ಭಯವಿಹ್ವಲಗೊಂಡಿದ್ದವು; ನಿಮ್ಮ ಹೃದಯಗಳು ಕಂಠ ನಾಳಗಳಿಗೆ ತಲಪಿದ್ದವು; ಅಲ್ಲಾಹನ ಬಗ್ಗೆ ಹಲವು ಭಾವನೆಗಳು ನಿಮ್ಮ ಮನಸ್ಸಿನಲ್ಲಿ ಮೂಡಿದ್ದವು. ಹಝ್ರ‌ತ್ ಪೈಗಂಬರ್(ಸ)ರು ಮತ್ತು ಮುಸ್ಲಿಮರು ಶತ್ರುಗಳ ಮುಂದೆ ಇದ್ದರು ಮತ್ತು ವಿವಿಧ ಸ್ಥಳಗಳಲ್ಲಿ ಕಂದಕವನ್ನು ಕಾವಲು ಮಾಡಲಾಯಿತು. ಅವರು ಅಲ್ಲಿಂದ ಕದಲಲಿಲ್ಲ. ಜೀವನಚರಿತ್ರೆಕಾರರು ಕಂದಕದಲ್ಲಿ ಕಾವಲುಗಾರರಾಗಿದ್ದ ಎಂಟು ಸ್ಥಳಗಳನ್ನು ಉಲ್ಲೇಖಿಸಿದ್ದಾರೆ ಮತ್ತು ಹಝ್ರ‌ತ್ ಝುಬೈರ್ ಬಿನ್ ಅವಾಮ್(ರ) ಅವರನ್ನು ಮೇಲ್ವಿಚಾರಕರನ್ನಾಗಿ ಮಾಡಲಾಗಿತ್ತು.

ಬನೂ ಖುರೈಝ‌ ಗೋತ್ರ ಒಪ್ಪಂದವನ್ನು ಮುರಿದ ಸುದ್ದಿ ಮುಸ್ಲಿಮರಿಗೆ ತಲುಪಿದಾಗ ಭಯ ವರ್ಧಿಸಿತು. ಮುಸ್ಲಿಮರಿಗೆ ಮಹಿಳೆಯರ

ಮತ್ತು ಮಕ್ಕಳ ಬಗ್ಗೆ ಚಿಂತೆ ಉಂಟಾಗಲು ತೊಡಗಿತು. ಹಝ್ರತ್ ಪೈಗಂಬರ್(ಸ)ರಿಗೆ ಈ ಸುದ್ದಿ ಮುಟ್ಟಿದಾಗ ಅವರು ಹಝ್ರತ್ ಸಲ್ಮ ಬಿನ್ ಅಸ್ಲಮ್(ರ)ರನ್ನು ಇನ್ನೂರು ಸೈನಿಕರೊಂದಿಗೆ ಮತ್ತು ಹಝ್ರತ್ ಝೈದ್ ಬಿನ್ ಹಾರಿಸ(ರ)ರನ್ನು ಮುನ್ನೂರು ಸೈನಿಕರೊಂದಿಗೆ ಮದೀನದ ಸಂರಕ್ಷಣೆಗಾಗಿ ಕಳುಹಿಸಿದರು. ರಾತ್ರಿ ಸಮಯದಲ್ಲಿ ಬೇರೆ ಬೇರೆ ಜಾಗಗಳಲ್ಲಿ ಕಾವಲು ನಿಲ್ಲಲು ಮತ್ತು ಪದೇ ಪದೇ ಅಲ್ಲಾಹು ಅಕ್ಬರ್ ಎಂದು ಘೋಷಣೆ ಕೂಗಲು ಹಝ್ರತ್ ಪೈಗಂಬರ್(ಸ) ಅವರಿಗೆ ಆದೇಶ ನೀಡಿದರು.

(ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-4, ಪುಟ-384-385, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಸ್ಸಹೀಹ್ ಮಿನ್ ಸೀರತುನ್ನಬಿ ಅಲ್‌ಅಝುವ್(ಸ), ಪುಟ-288, ಸಂಪುಟ-10, ಅಲ್‌ಮರ್ಕಝುಲ್ ಅಲ್‌ಇಸ್ಲಾಮಿ ಲಿದ್ದರಸಾತ್, ಬೈರುತ್ 2006)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಘಟನೆಯನ್ನು ಹೀಗೆ ವಿವರಿಸಿರುವರು: "ಆ ಸಮಯದಲ್ಲಿ ಮದೀನಾದ ಆಕಾಶವು ಬಾಹ್ಯ ಕಾರಣಗಳ ವಿಷಯದಲ್ಲಿ ತುಂಬಾ ಗಾಢವಾಗಿತ್ತು. ಸಾವಿರಾರು ರಕ್ತಪಿಪಾಸು ಶತ್ರುಗಳು ನಗರದ ಸುತ್ತಲೂ ಬೀಡುಬಿಟ್ಟಿದ್ದರು, ಅವರು ಯಾವಾಗಲೂ ಮುಸ್ಲಿಮರ ಮೇಲೆ ದಾಳಿ ಮಾಡಲು ಮತ್ತು ಅವಕಾಶವಿದ್ದರೆ ಅವರನ್ನು ಕೊಲ್ಲಲು ಕಾಯುತ್ತಿದ್ದರು. ನಗರದಲ್ಲಿ ಮುಸ್ಲಿಮರ ಪರವಾಗಿ ದೇಶದ್ರೋಹಿ ಬನೂ ಖುರೈಝಾ ಇದ್ದರು, ಅವರ ನೂರಾರು ಶಸ್ತ್ರಸಜ್ಜಿತ ಯುವಕರು ತಮ್ಮಲ್ಲಿ ಸೈನ್ಯಕ್ಕಿಂತ ಕಡಿಮೆಯಿಲ್ಲ ಮತ್ತು ಅವರು ಬಯಸಿದಾಗ ಅಥವಾ ಅವಕಾಶ ಸಿಕ್ಕಾಗ ಹಿಂಬದಿಯಿಂದ ಮುಸ್ಲಿಮರ ಮೇಲೆ ದಾಳಿ ಮಾಡಬಹುದಾಗಿತ್ತು. ಮತ್ತು ನಗರದಲ್ಲಿದ್ದ ಮುಸ್ಲಿಮ್ ಮಹಿಳೆಯರು ಮತ್ತು ಮಕ್ಕಳು ಎಲ್ಲಾ ಸಮಯದಲ್ಲೂ ಅವರ ಬಲಿಪಶುಗಳಂತೆ ಇದ್ದರು. ಯಾವುದೇ ವಿವೇಕವಂತನಿಗೆ ಮನವರಿಕೆ ಮಾಡಬಹುದಾದ ಈ ಅವಸ್ಥೆಯಿಂದ ದುರ್ಬಲ ಮುಸ್ಲಿಮರಲ್ಲಿ ಬಹಳ ಕಳವಳ ಮತ್ತು ತಬ್ಬಿಬ್ಬು ಉಂಟುಮಾಡಿತು. ಮತ್ತು ಕಪಟವಿಶ್ವಾಸಿಗಳು ಹೀಗೆ ಹೇಳಲು ಪ್ರಾರಂಭಿಸಿದರು, **ಮಾ ವಅದನಲ್ಲಾಹು ವ ರಸೂಲುಹೂ ಇಲ್ಲಾ ಗುರೂರಾ** (ಅಲ್‌ಅಹ್‌ಝಾಬ್: 13) ಅಂದರೆ: ಆಗ ಕಪಟ ವಿಶ್ವಾಸಿಗಳು ಮತ್ತು ತಮ್ಮ ಹೃದಯಗಳಲ್ಲಿ ರೋಗವಿರುವವರು, 'ಅಲ್ಲಾಹನು ಮತ್ತು ಅವನ ಸಂದೇಶವಾಹಕ ನಮಗೆ ಸುಳ್ಳು ವಾಗ್ದಾನವನ್ನು ಮಾತ್ರವೇ ನೀಡಿದರು' ಎಂದು ಹೇಳಿದರು. ಕೆಲವು ಕಪಟವಿಶ್ವಾಸಿಗಳು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಪಟ್ಟಣದಲ್ಲಿ ನಮ್ಮ ಮನೆಗಳು ಪೂರ್ಣವಾಗಿಯೂ ಅರಕ್ಷಿತಾವಸ್ಥೆಯಲ್ಲಿವೆ. ನೀವು ಅನುಮತಿ ಕೊಟ್ಟರೆ ನಾವು ನಮ್ಮ ಮನೆಗಳಲ್ಲಿ ಇದ್ದುಕೊಂಡು ಅವುಗಳ ಸಂರಕ್ಷಣೆ ಮಾಡುವೆವು. ಅದಕ್ಕೆ ಉತ್ತರವಾಗಿ ಹೀಗೆ ದಿವ್ಯವಾಣಿ ಉಂಟಾಯಿತು: **ವಮಾ ಹಿಯ ಬಿ ಔರತಿನ್ ಇನ್ ಯುರೀದೂನ ಇಲ್ಲಾ ಫಿರಾರ**. (ಅಹ್‌ಝಾಬ್: 14) ಅರ್ಥ: ಅವರಿಗೆ ತಮ್ಮ ಮನೆಗಳ ಅರಕ್ಷಿತಾವಸ್ಥೆಯ ಚಿಂತೆಯಿರಲಿಲ್ಲ. ಅವರು ಕೇವಲ ಯುದ್ಧ ಮೈದಾನದಿಂದ ತಪ್ಪಿಸಿ ಓಡಿಹೋಗುವ ಮಾರ್ಗವನ್ನು ಹುಡುಕುತ್ತಿದ್ದರು. ಆದರೆ ಇದು ಪ್ರಾಮಾಣಿಕ ಮುಸ್ಲಿಮರ ವಿಶ್ವಾಸವನ್ನು ವ್ಯಕ್ತಪಡಿಸುವ ಸಮಯವಾಗಿತ್ತು. ಆದ್ದರಿಂದ ಪವಿತ್ರ ಖುರ್‌ಆನ್ ಹೇಳುತ್ತದೆ.

**ವಲಮ್ಮಾ ರಅಲ್‌ಮುಮಿನೂನಲ್ ಅಹ್‌ಝಾಬ ಖಾಲೂ ಹಾಝಾ ಮಾ ವಅದ್‌ನಲ್ಲಾಹು ವ ರಸೂಲುಹೂ ವಸದಖಲ್ಲಾಹು ವ ರಸೂಲುಹೂ ವಮಾ ಝಾದಹುಮ್ ಇಲ್ಲಾ ಈಮಾನಂವ್ವ ತಸ್ಲೀಮಾ**– (ಅಲ್‌ಅಹ್‌ಝಾಬ್: 23) ಅಂದರೆ: ಸತ್ಯ ವಿಶ್ವಾಸಿಗಳು ಆ (ಶತ್ರು) ಸೈನ್ಯವನ್ನು ಕಂಡಾಗ, 'ಇದು ಅಲ್ಲಾಹ್ ಮತ್ತು ಅವನ ಸಂದೇಶವಾಹಕ ನಮಗೆ ವಾಗ್ದಾನ ಮಾಡಿದುದಾಗಿದೆ. ಅಲ್ಲಾಹ್ ಮತ್ತು ಅವನ ಸಂದೇಶವಾಹಕ ಸತ್ಯವನ್ನೇ ನುಡಿದಿದ್ದಾರೆ' ಎಂದು ಹೇಳಿದರು.ಅದು (ಆ ಘಟನೆ) ಅವರ ವಿಶ್ವಾಸವನ್ನೂ ವಿಧೇಯತೆಯನ್ನೂ ವೃದ್ಧಿಗೊಳಿಸಿತು.

ಒಟ್ಟಿನಲ್ಲಿ ಈ ದಾಳಿಯಿಂದಲೂ, ಅವರ ವಿಶ್ವಾಸ ಮತ್ತು ಸ್ವೀಕಾರದಲ್ಲಿ ಮಿತಿಮೀರಿತು, ಆದರೆ ಸಂದರ್ಭದ ಸೂಕ್ಷ್ಮತೆ ಮತ್ತು ಪರಿಸ್ಥಿತಿಯ ಅಪಾಯಕಾರಿ ಅಂಶವನ್ನು ಎಲ್ಲರೂ ಸಮಾನವಾಗಿ ತಿಳಿದಿದ್ದರು. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ.

**ಇಝ್ ಜಾಊಕುಮ್ಮಿನ್ ಫೌಖಿಕುಮ್ ಮಿನ್ ಅಸ್‌ಫಲ ಮಿಂಕುಮ್ ವ ಇಝ್ ಝಾಗತಿಲ್ ಅಬ್ಸಾರು ವ ಬಲಗತಿಲ್ ಖುಲೂಬುಲ್‌ಹನಾಜಿರ ವತಝುನ್ನೂನ ಬಿಲ್ಲಾಹಿಝ್ಝುನೂನ– ಹುನಾಲಿಕಬ್‌ತುಲಿ ಯಲ್‌ಮುಮಿನೂನ ವ ಝುಲ್‌ಝಿಲೂ ಝುಲ್‌ಝಾಲನ್ ಶದೀದಾ**. (ಅಲ್‌ಅಹ್‌ಝಾಬ್: 11-12) ಅಂದರೆ: ಅವರು ನಿಮ್ಮನ್ನು ಮೇಲ್ಭಾಗದಿಂದಲೂ ಕೆಳಭಾಗದಿಂದಲೂ ಸುತ್ತುವರಿದು ಬಂದ ಸಂದರ್ಭದಲ್ಲಿ! ಆಗ ನಿಮ್ಮ ಕಣ್ಣುಗಳು ಭಯವಿಹ್ವಲಗೊಂಡಿದ್ದವು; ನಿಮ್ಮ ಹೃದಯಗಳು ಕಂಠ ನಾಳಗಳಿಗೆ ತಲಪಿದ್ದವು; ಅಲ್ಲಾಹನ ಬಗ್ಗೆ ಹಲವು ಭಾವನೆಗಳು ನಿಮ್ಮ ಮನಸ್ಸಿನಲ್ಲಿ ಮೂಡಿದ್ದವು. ಅಲ್ಲಿ (ಆ ಸಂದರ್ಭದಲ್ಲಿ) ಸತ್ಯವಿಶ್ವಾಸಿಗಳು ಪರೀಕ್ಷೆಗೊಳಗಾದರು ಮತ್ತು ಬಲವಾದ ಕಂಪನದಿಂದ ಅವರು ಕಂಪಿಸಲ್ಪಟ್ಟರು."

ಒಟ್ಟಿನಲ್ಲಿ ಅಂತಹ ಅಪಾಯಕಾರಿ ಸಮಯದಲ್ಲಿ ಕೆಲವು ದುರ್ಬಲರನ್ನು ಮತ್ತು ಕೆಲವು ಕಪಟವಿಶ್ವಾಸಿಗಳನ್ನು ಕೂಡ ಒಳಗೊಂಡಿರುವ ಮುಸ್ಲಿಮರ ಚಿಕ್ಕ ಸಂಘಕ್ಕೆ ಶತ್ರುಗಳನ್ನು ಎದುರಿಸಲು ಹೇಗೆ ಸಾಧ್ಯವಿತ್ತು. ದುರ್ಬಲ ಸಂದರ್ಭಗಳಲ್ಲಿ ಸಾಕಷ್ಟು ಕಾವಲು ನೀಡಲು ಅವರ ಬಳಿ ಸಾಕಷ್ಟು ಪುರುಷರು ಇರಲಿಲ್ಲ. ಆದ್ದರಿಂದ ಹಗಲು ರಾತ್ರಿಯ ಕಠಿಣ ಡ್ಯುಟಿಯು ಮುಸ್ಲಿಮರನ್ನು ಅಪಹರಿಸುವಂತೆ ಮಾಡಿತು. ಮತ್ತೊಂದೆಡೆ, ಬನೂ ಖುರೈಝಾ ಅವರ ವಿಶ್ವಾಸಘಾತುಕತನದಿಂದಾಗಿ, ಮಹಿಳೆಯರು ಮತ್ತು ಮಕ್ಕಳು ಸುರಕ್ಷಿತವಾಗಿರಲು ನಗರದ ಬೀದಿಗಳಲ್ಲಿ ಕಾವಲುಗಾರರನ್ನು ಬಲಪಡಿಸುವುದು ಅಗತ್ಯವಾಗಿತ್ತು. ಸತ್ಯನಿಷೇಧಿಗಳ ಸೈನಿಕರು ಮುಸ್ಲಿಮರಿಗೆ ಎಲ್ಲ ರೀತಿಯಿಂದಲೂ ಕಿರುಕುಳ ನೀಡಲು ಪ್ರಯತ್ನಿಸಿದರು. ಕೆಲವೊಮ್ಮೆ ಅವರು ದುರ್ಬಲ ಸ್ಥಳವನ್ನು ಆಕ್ರಮಿಸುತ್ತಿದ್ದರು ಮತ್ತು ಒಟ್ಟುಗೂಡುತ್ತಿದ್ದರು ಮತ್ತು ಅದನ್ನು ರಕ್ಷಿಸಲು ಮುಸ್ಲಿಮರು ಅಲ್ಲಿ ಸೇರುತ್ತಿದ್ದರು, ನಂತರ ಅವರು ತಕ್ಷಣವೇ ತಿರುಗಿ ಮತ್ತೊಂದು ಸಂದರ್ಭದಲ್ಲಿ ದಾಳಿ ಮಾಡುತ್ತಿದ್ದರು ಮತ್ತು ಮುಸ್ಲಿಮರು ಓಡಿಹೋಗಿ ಅಲ್ಲಿತಲುಪುತ್ತಿದ್ದರು. ಕೆಲವೊಮ್ಮೆ ಅವರು (ಸತ್ಯನಿಷೇಧಿಗಳ ಸೈನ್ಯವು) ಒಂದೇ ಸಮಯದಲ್ಲಿ ಎರಡು ಅಥವಾ ಮೂರು ಸ್ಥಳಗಳ ಮೇಲೆ ದಾಳಿ ಮಾಡುತ್ತಿದ್ದರು, ಇದರ ಪರಿಣಾಮವಾಗಿ ಮುಸ್ಲಿಂ ಸಮುದಾಯವು ಚದುರಿಹೋಗುತ್ತಿತ್ತು ಮತ್ತು ತುಂಡುಗಳಾಗಿ ವಿಭಜನೆಯಾಗುತ್ತಿತ್ತು, ಮತ್ತು ಕೆಲವೊಮ್ಮೆ ಸ್ಥಿತಿಗತಿಗಳು ಬಹಳಷ್ಟು ಅಪಾಯಕರವಾಗುತ್ತಿದ್ದುವು. ದುರ್ಬಲ ಸಮಯದಿಂದ ಲಾಭ ಪಡೆದು ಸತ್ಯನಿಷೇಧಿಗಳ ಸೇನೆ ಪಟ್ಟಣದ ಗಡಿಗಳ ಒಳಗೆ ಪ್ರವೇಶಿಸುವ ಸಾಧ್ಯತೆಯಿತ್ತು. ಇಂತಹ ದಾಳಿಗಳನ್ನು ಮುಸ್ಲಿಮರು ಸಾಮಾನ್ಯವಾಗಿ ಬಿಲ್ಲುಗಾರಿಕೆಯ ಮೂಲಕ ತಡೆಯುತ್ತಿದ್ದರು. ಆದರೆ ಕೆಲವೊಮ್ಮೆ ಸತ್ಯನಿಷೇಧಗಳ ಸೈನ್ಯದ ಒಂದು ತಂಡವು ಮುಸ್ಲಿಮರನ್ನು ಬಿಲ್ಲುಗಾರಿಕೆಯ ಮೂಲಕ ಎದುರಿಸುತ್ತಿದ್ದರೆ ಇನ್ನೊಂದು ತಂಡವು ಕಂದಕದ ದುರ್ಬಲ ಭಾಗವನ್ನು ಆಕ್ರಮಿಸಲು ಧಾವಿಸಿ ಬಂದು ಅದರ ಮೇಲೆ ನೆಗೆಯಲು ಬಯಸುತ್ತಿದ್ದರು. ಈ ಹೋರಾಟವು ಮುಂಜಾನೆಯಿಂದ ಸಂಜೆಯವರೆಗೆ ಮತ್ತು ಕೆಲವೊಮ್ಮೆ ರಾತ್ರಿಯವರೆಗೂ ಮುಂದುವರೆಯುತ್ತಿತ್ತು." (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಆಹಿಬ್(ರ) ಎಂ.ಎ, ಪುಟ-585-586)

ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ರು ಘತ್‌ಫಾನ್‌ರೊಂದಿಗೆ ಸಂಧಾನದ ಬಗ್ಗೆ ಸಹಾಬಿಗಳನ್ನು, ವಿಶೇಷವಾಗಿ ಅನ್ಸಾರ್‌ಗಳನ್ನು ಕೇಳಿದರು ಎಂದು ಇತಿಹಾಸದಲ್ಲಿ ಉಲ್ಲೇಖಿಸಲಾಗಿದೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಇದನ್ನು ಹೀಗೆ ವಿವರವಾಗಿ ವಿವರಿಸಿದ್ದಾರೆ: "ಆ ದಿನಗಳು ಮುಸ್ಲಿಮರಿಗೆ ಅತ್ಯಂತ ಕಷ್ಟ, ಚಿಂತೆ ಮತ್ತು ಅಪಾಯದ ದಿನಗಳಾಗಿದ್ದುವು. ಮತ್ತು ಮುತ್ತಿಗೆಯು ದೀರ್ಘವಾದಂತೆ, ಮುಸ್ಲಿಮರ ಪ್ರತಿರೋಧದ ಬಲವು ಸಾಮಾನ್ಯವಾಗಿ ದುರ್ಬಲಗೊಳ್ಳುತ್ತಿತ್ತು ಮತ್ತು ಅವರ ಹೃದಯಗಳು ನಂಬಿಕೆ ಮತ್ತು ಪ್ರಾಮಾಣಿಕತೆಯಿಂದ ತುಂಬಿದ್ದರೂ, ಭೌತಿಕ ಕಾನೂನಿನ ಅಡಿಯಲ್ಲಿ ನಡೆಯುವ ದೇಹವು ದುರ್ಬಲವಾಗುತ್ತಾ ಹೋಗುತ್ತಿತ್ತು. ಹಝ್ರತ್ ಪೈಗಂಬರ್(ಸ)ರು ಈ ಪರಿಸ್ಥಿತಿಗಳನ್ನು ಕಂಡಾಗ, ಅವರು(ಸ) ಅನ್ಸಾರ್‌ಗಳ ಮುಖ್ಯಸ್ಥರಾದ ಸಅದ್ ಬಿನ್ ಮುಆದ್(ರ) ಮತ್ತು ಸಅದ್ ಬಿನ್ ಉಬಾದಾ(ರ) ಅವರನ್ನು ಕರೆದು ಅವರಿಗೆ ಸಂಪೂರ್ಣ ಪರಿಸ್ಥಿತಿಯನ್ನು ತಿಳಿಸಿದರು ಮತ್ತು ಈ ಪರಿಸ್ಥಿತಿಗಳಲ್ಲಿ ನಾವು ಏನು ಮಾಡಬೇಕು ಎಂಬುದರ ಕುರಿತು ಸಲಹೆಯನ್ನು ಕೇಳಿದರು ಮತ್ತು ಅದರೊಂದಿಗೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಗತ್‌ಫಾನ್ ಗೋತ್ರಕ್ಕೆ ಸಂಪತ್ತಿನಿಂದ ಏನಾದರೂ ಕೊಟ್ಟು ಈ ಯುದ್ಧವನ್ನು ತಡೆಯಲು ಪ್ರಯತ್ನಿಸಿರಿ. ಸಅದ್ ಬಿನ್ ಮುಆದ್ ಮತ್ತು ಸಅದ್ ಬಿನ್ ಉಬಾದಾ ಅವರು ಒಂದೇ ಧ್ವನಿಯಲ್ಲಿ ಹೇಳಿದರು, "ಯಾ ರಸೂಲಲ್ಲಾಹ್(ಶ)!! ನೀವು ಈ ಬಗ್ಗೆ ಯಾವುದೇ ದೈವವಾಣಿ ಹೊಂದಿದ್ದರೆ, ನಾವು ಅದನ್ನು ಸ್ವೀಕರಿಸುತ್ತೇವೆ. ಈ ಸಂದರ್ಭದಲ್ಲಿ, ನೀವು ಈ ಸಲಹೆಯ ಪ್ರಕಾರ ಸಂತೋಷದಿಂದ ಕಾರ್ಯನಿರ್ವಹಿಸಿರಿ." ಹಝ್ರತ್ ಪೈಗಂಬರ್(ಸ) ಹೇಳಿದರು: "ಇಲ್ಲ, ಇಲ್ಲ ಈ ವಿಚಾರದಲ್ಲಿ ನನಗೆ ಯಾವುದೇ ದೈವವಾಣಿ ಲಭಿಸಿಲ್ಲ. ನಾನು ನಿಮ್ಮ ಜನರ ಸಂಕಟದಿಂದ ಸಲಹೆ ಮಾತ್ರ ಕೇಳುತ್ತಿದ್ದೇನೆ." ಆಗ ಅವರಿಬ್ಬರೂ ಒಂದೇ ಸ್ವರದಲ್ಲಿ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಾವು ಶಿರ್ಕಿನ ಸ್ಥಿತಿಯಲ್ಲಿ ಕೂಡ ಶತ್ರುಗಳಿಗೆ ಏನೂ ನೀಡದೇ ಇದ್ದು ಈಗ ಮುಸ್ಲಿಮರಾಗಿ

ಏಕೆ ನೀಡಬೇಕು. ಅಲ್ಲಾಹನಾಣೆ, ನಾವು ಅವರಿಗೆ ಖಡ್ಗದ ಅಂಚು ವಿನಾ ಬೇರೇನು ಕೊಡುವುದಿಲ್ಲ.

ಈಗ ಯುದ್ಧವೇ ಇದೆ. "ಸತ್ಯದಲ್ಲಿ ಮದೀನದ ನಿಜವಾದ ನಿವಾಸಿಗಳಾದ ಅನ್ಸಾರರ ಕುರಿತೇ ಹಝ್ರ್‌ರತ್ ಪೈಗಂಬರ್(ಸ)ರಿಗೆ ಚಿಂತೆಯಿತ್ತು. ಇಂತಹ ಸ್ಥಿತಿಯಲ್ಲಿ ಅನ್ಸಾರರು ತಳಮಳಗೊಂಡಿರುವರೋ ಎಂಬುದನ್ನು ಅರಿತು ಅವರ ಮಾನಸಿಕ ಅವಸ್ಥೆಯನ್ನು ಗೊತ್ತುಮಾಡುವ ಮತ್ತು ಅವರು ಗಾಬರಿಗೊಂಡಿರುವುದಾದರೆ ಅವರನ್ನು ಸಮಾಧಾನಪಡಿಸುವ ಉದ್ದೇಶದಿಂದಲೇ ಬಹುಶಃ ಈ ಸಲಹೆಯನ್ನು ಹಝ್ರ್‌ರತ್ ಪೈಗಂಬರ್(ಸ) ಕೇಳಿರಬಹುದು. ಅವರ ಉತ್ತರವನ್ನು ಕೇಳಿ ಹಝ್ರ್‌ರತ್ ಪೈಗಂಬರ್(ಸ) ಬಹಳ ಖುಶಿಯಿಂದ ಅವರ ಸಲಹೆಯನ್ನು ಅಂಗೀಕರಿಸಿದರು ಮತ್ತು ಯುದ್ಧ ಮುಂದುವರೆಯಿತು." (ಸೀರತ್ ಖಾತಮುನ್ನಬಿಯೀನ್(ಸ), ಹಝ್ರ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-589-590)

ಮುಂಚೆಯೇ ಹೇಳಿದಂತೆ, ಕಂದಕವು ಬಲವಾದ ರಕ್ಷಣಾತ್ಮಕ ಗೋಡೆಯಾಗಿ ಕೆಲಸ ಮಾಡುತ್ತಿದ್ದರೂ, ಮುಸ್ಲಿಮರು ಸಂಪೂರ್ಣವಾಗಿ ಸುರಕ್ಷಿತವಾಗಿದ್ದರು ಎಂದರ್ಥವಲ್ಲ. ಮೊದಲಿಗೆ ಕಪಟವಿಶ್ವಾಸಿಗಳು ಮತ್ತು ವಿಶೇಷವಾಗಿ ಬನೂ ಖುರೈಝಾರಂತಹ ಹೋರಾಟಗಾರರು ಮದೀನಾದಲ್ಲಿಯೇ ಉಳಿದಿದ್ದರು ಮತ್ತು ಒಪ್ಪಂದದ ಮುಕ್ತಾಯದ ನಂತರ ಅವರು ಅಪಾಯಕಾರಿ ವೈರಿಗಳಾಗಿ ನಿಂತಿದ್ದರು, ಇನ್ನೊಂದೆಡೆ ಕಂದಕವಿದ್ದರೂ ಕೆಲವೆಡೆ ಶತ್ರುಗಳ ದಾಳಿಯ ಭೀತಿ ಎದುರಾಗಿದ್ದು, ಕಂದಕ ದಾಟಿ ಶತ್ರುಗಳು ಒಳ ಪ್ರವೇಶಿಸುವ ಸಾಧ್ಯತೆಯೂ ಇತ್ತು. ಈ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಪ್ರತಿ ಸ್ಥಳದಲ್ಲೂ ನಿರಂತರ ಕಾವಲು ನೀಡಲಾಗುತ್ತಿತ್ತು ಮತ್ತು ಈ ಚಿಂತಾಜನಕ ಸ್ಥಿತಿಯಲ್ಲಿ ವಿವಿಧ ಸ್ಥಳಗಳಲ್ಲಿ ಹಝ್ರ್‌ರತ್ ಪೈಗಂಬರ್(ಸ) ಸಹ ಸ್ವತಃ ಕಾವಲು ನಿಲ್ಲುತ್ತಿದ್ದರು. ಹಝ್ರ್‌ರತ್ ಪೈಗಂಬರ್(ಸ)ರು ಸಹಾಬಿಗಳನ್ನು ಉತ್ಸಾಹ ನೀಡುತ್ತಿದ್ದರು ಮದೀನದ್ದು ಬಹಳ ಚಳಿಯ ರಾತ್ರಿಗಳಾಗಿದ್ದುವು. ಹಸಿವಿನ ಕಷ್ಟತೆಗಳು ಬೇರೆ.

ಹಝ್ರ್‌ರತ್ ಆಯಿಶಾ(ರ) ಹೇಳುತ್ತಾರೆ: ಹಝ್ರ್‌ರತ್ ಪೈಗಂಬರ್(ಸ)ರು ಕಾವಲು ಕಾಯಲು ಕಂದಕದ ಬಿರುಕಿಗೆ ಹೋಗುತ್ತಿದ್ದರು. ಚಳಿ ಜಾಸ್ತಿಯಾದಾಗ ನನ್ನ ಬಳಿ ಬರುತ್ತಿದ್ದರು, ದೇಹ ಬೆಚ್ಚಗಾದಾಗ ಪುನಃ ಕಂದಕದ ಬಿರುಕಿಗೆ ಹೋಗುತ್ತಿದ್ದರು, ಮತ್ತು ಈ ಕಡೆಯಿಂದ ಜನ ಬರಬಹುದೋ ಎಂಬ ಭಯ ನನಗೆ ಇದೆ ಎಂದು ಹೇಳಿದರು. ಹಝ್ರ್‌ರತ್ ಆಯಿಶ(ರ) ಹೇಳುತ್ತಾರೆ: ಒಂದು ದಿನ ಹಝ್ರ್‌ರತ್ ಪೈಗಂಬರ್(ಸ) ಎಷ್ಟು ಆಯಾಸಗೊಂಡಿದ್ದರು ಎಂದರೆ, ಅವರು ಹೀಗೆ ಹೇಳಿದರು: ಕಾವಲು ನಿಲ್ಲಲು ಯಾರಾದರೂ ಒಳ್ಳೆಯ ವ್ಯಕ್ತಿ ಇರುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಆಗ ಸಅದ್ ಬಿನ್ ವಖಾಸ್(ರ) ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಾನು ನಿಮ್ಮ ಸಂರಕ್ಷಣೆಗಾಗಿ ಕಾವಲು ನಿಲ್ಲುತ್ತೇನೆ. ಹಝ್ರ್‌ರತ್ ಪೈಗಂಬರ್(ಸ) ಹೀಗೆ ಹೇಳಿದರು: ನಾನು ಹೇಳುವ ಜಾಗಕ್ಕೆ ಹೋಗು, ಅಲ್ಲಿ ಕಂದಕದ ದುರ್ಬಲವಾದ ಒಂದು ಭಾಗವಿದೆ. ಅಲ್ಲಿಗೆ ಹೋಗಿ ಕಾವಲು ನಿಲ್ಲು. ಹಝ್ರ್‌ರತ್ ಪೈಗಂಬರ್(ಸ)ರ ತ್ಯಾಗಶೀಲ ಸಹಾಬಿಯರ ನಿಷ್ಠೆಯ ಸ್ಥಿತಿಯು ಅದ್ಭುತಕರವಾಗಿತ್ತು. ಅವರು ಈ ರೀತಿಯಾಗಿ ಸ್ವತಃ ತಮ್ಮನ್ನು ಸಮರ್ಪಿಸುತ್ತಿದ್ದರು. ಮತ್ತೊಂದೆಡೆ ಹಝ್ರ್‌ರತ್ ಪೈಗಂಬರ್(ಸ) ತನ್ನ ಸ್ವಂತ ಜೀವಕ್ಕಿಂತ ಇತರರಿಗೆ ಆದ್ಯತೆ ನೀಡುತ್ತಿದ್ದರು. ಅವರು ಎಂತಹ ಧೈರ್ಯವಂತರು ಆಗಿದ್ದರು ಎಂದರೆ, ತನ್ನ ಜೀವದ ಚಿಂತೆ ಬಿಟ್ಟು ಅವರಿಗೆ ಮದೀನ ನಿವಾಸಿಗಳ ಚಿಂತೆಯಿತ್ತು. ಅದಕ್ಕಾಗಿ ಹೆಚ್ಚಾಗಿ ಸ್ವತಃ ಹಲವೆಡೆ ಇರುತ್ತಿದ್ದರು. ಕೆಲವೊಮ್ಮೆ ವಿಶ್ರಾಂತಿ ಪಡೆಯಲು ಡೇರೆಗೆ ಹೋಗುತ್ತಿರುವುದಾಗಿ ತೋರಿಬರುತ್ತಿತ್ತಾದರೂ ಅದರ ಹೆಚ್ಚಿನ ಭಾಗ ಅಲ್ಲಾಹನ ಮುಂದೆ ಸಾಷ್ಟಾಂಗ ಮಾಡಿಕೊಂಡು ದುಆ ಮಾಡುವುದಾಗಿ ಕಾಣಬಹುದಾಗಿತ್ತು.

ಆದ್ದರಿಂದ, ಹಝ್ರ್‌ರತ್ ಉಮ್ಮೆ ಸಲಮಾ(ರ) ಹೇಳುತ್ತಾರೆ: ನಾನು ಹಝ್ರ್‌ರತ್ ಪೈಗಂಬರ್(ಸ) ಅವರೊಂದಿಗೆ ಕಂದಕದ ಸಂದರ್ಭದಲ್ಲಿ ಹಾಜರಿದ್ದೆ ಮತ್ತು ನಾವು ತೀವ್ರ ಚಳಿಯಲ್ಲಿದ್ದೆವು. ಒಂದು ರಾತ್ರಿ ಹಝ್ರ್‌ರತ್ ಪೈಗಂಬರ್(ಸ)ರು ಎದ್ದುನಿಂತು ಅವರಿಗೆ ಸಾಧ್ಯವಾದಷ್ಟು ತಮ್ಮ ಡೇರೆಯಲ್ಲಿ ನಮಾಝ್‌ನ್ನು ನಿರ್ವಹಿಸುವುದನ್ನು ನಾನು ನೋಡಿದೆ, ಅಂದರೆ ಅವರಿಗೆ ಸಾಧ್ಯವಾದಷ್ಟು ಕಾಲ ಪ್ರಾರ್ಥಿಸಿದರು. ಮತ್ತೆ ಸ್ವಲ್ಪ ಹೊತ್ತು ಡೇರೆಯ ಹೊರಗೆ ಹೋಗಿದ್ದನ್ನು ನೋಡಿದೆ. ಮತ್ತೆ ನಾನು ಹಝ್ರ್‌ರತ್ ಪೈಗಂಬರ್(ಸ0ರು ಹೀಗೆ ಹೇಳುತ್ತಿರುವುದನ್ನು ಕೇಳಿಸಿಕೊಂಡೆ. ಈ ಸತ್ಯನಿಷೇಧಿ ಕುದುರೆಸವಾರರು ಕಂದಕವನ್ನು ದಾಟಲು ಪ್ರಯತ್ನಿಸುತ್ತಿದ್ದಾರೆ. ಮತ್ತೆ ಅಬ್ಬಾದ್ ಬಿನ್ ಬಿಶರ್(ರ) ಅವರನ್ನು ಕರೆದಾಗ ಅವರು ಲಬ್ಬೈಕ್! ನಾನು ಹಾಜರಿದ್ದೇನೆ ಎಂದು ಹೇಳಿದರು. ಹಝ್ರ್‌ರತ್ ಪೈಗಂಬರ್(ಸ)ರು ಕೇಳಿದರು ನಿಮ್ಮೊಂದಿಗೆ ಬೇರೆ ಯಾರಾದರೂ ಇದ್ದಾರೆಯೇ? ಅದಕ್ಕೆ ಅವರು ಹೌದು ಎಂದರು. ನನ್ನೊಂದಿಗೆ ಕೆಲವು ಸಹಚರರಿದ್ದಾರೆ ಮತ್ತು ನಿಮ್ಮ ಡೇರೆಯ ಸುತ್ತಲೂ ಕಾವಲು ಕಾಯುತ್ತಿದ್ದಾರೆ. ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ನಿಮ್ಮ ಸಹಚರರನ್ನು ಕರೆದುಕೊಂಡು ಕಂದಕವನ್ನು ಸುತ್ತಿ ನೋಡಿ. ಈ ಸತ್ಯನಿಷೇಧಿಗಳು ಕಂದಕದ ಸುತ್ತಲು ಸುತ್ತುತ್ತಿದ್ದರು. ಅಜ್ಞಾನದಲ್ಲಿ ನಿಮ್ಮ ಮೇಲೆ ದಾಳಿ ಮಾಡುವುದು ಅವರ ಬಯಕೆಯಾಗಿತ್ತು. ಅವರು ಹೇಳಿದರು, **ಅಲ್ಲಾಹುಮ್ಮ ಫದ್‌ಫಅ್ ಅನ್ನ ಶರ್ರಹುಮ್, ವನ್‌ಸುರ್‌ನಾ ಅಲೈಹಿಮ್, ವಗ್‌ಲಿಬ್‌ಹುಮ್, ಫಲಾ ಯುಗ್‌ಲಿಬುಹುಮ್ ಅಹದುನ್ ಗೈರುಕ-** ಯಾ ಅಲ್ಲಾಹ್! ಅವರ ದುಷ್ಟತನವನ್ನು ನಮ್ಮಿಂದ ತೆಗೆದುಹಾಕು ಮತ್ತು ಅವರ ವಿರುದ್ಧ ನಮಗೆ ಸಹಾಯ ಮಾಡು ಮತ್ತು ಅವರನ್ನು ಸೋಲಿಸು. ನಿನ್ನನ್ನು ಹೊರತುಪಡಿಸಿ ಯಾರೂ ಅವರನ್ನು ಸೋಲಿಸಲು ಸಾಧ್ಯವಿಲ್ಲ. ಅಬ್ಬಾದ್ ತಮ್ಮ ಸಹಚರರೊಂದಿಗೆ ಕಂದಕದ ಸುತ್ತಲು ಗಸ್ತು ಮಾಡಲು ಹೊರಟಿದಾಗ ಅಬು ಸುಫ್ಯಾನ್ ಬಿನ್ ಹರ್ಬ್ ತನ್ನ ಸಹಚರರೊಂದಿಗೆ ಕಂದಕದ ಕಿರಿದಾದ ಜಾಗದಲ್ಲಿ ಸುತ್ತುತ್ತಿದ್ದನು. ಮುಸ್ಲಿಮರಿಗೆ ಅವರ ಬಗ್ಗೆ ತಿಳಿದಾಗ, ಅವರು ಕಲ್ಲುಗಳು ಮತ್ತು ಬಾಣಗಳಿಂದ ಅವರನ್ನು ಹೊಡೆಯಲು ಪ್ರಾರಂಭಿಸಿದರು, ಇದರಿಂದಾಗಿ ಅವರು ತಮ್ಮ ಸ್ಥಳಗಳಿಗೆ ಮರಳಿದರು, ಅಂದರೆ ಶತ್ರು ಅಲ್ಲಿಂದ ಮರಳಿದರು. ಹಝ್ರ್‌ರತ್ ಅಬ್ಬಾದ್(ರ) ಹೇಳುತ್ತಾರೆ: ನಾನು ಹಝ್ರ್‌ರತ್ ಪೈಗಂಬರ್(ಸ) ಅವರ ಸನ್ನಿಧಿಗೆ ಮರಳಿದೆ. ನಾನು ಹಝ್ರ್‌ರತ್ ಪೈಗಂಬರ್(ಸ)ರು ನಮಾಝ್ ನಿರ್ವಹಿಸುತ್ತಿರುವುದನ್ನು ನೋಡಿದೆ, ಆದ್ದರಿಂದ ನಾನು ಅವರಿಗೆ ಇದರ ಬಗ್ಗೆ ತಿಳಿಸಿದೆ. ಹಝ್ರ್‌ರತ್ ಉಮ್ಮೆ ಸಲಮಾ(ರ) ಹೇಳುತ್ತಾರೆ: ಅಬ್ಬಾದ್ ಬಿನ್ ಬಿಶ್ರ್(ರ) ಅವರ ಮೇಲೆ ಅಲ್ಲಾಹನು ಕರುಣಿಸಲಿ. ಎಲ್ಲಾ ಸಹಚರರ ನಡುವೆ, ಅವರು ಹಝ್ರ್‌ರತ್ ಪೈಗಂಬರ್(ಸ)ರ ಡೇರೆಯೊಂದಿಗೆ ಹೆಚ್ಚು ಇರುತ್ತಿದ್ದರು. ಅವರು ಯಾವಾಗಲೂ ಹಝ್ರ್‌ರತ್ ಪೈಗಂಬರ್(ಸ) ಅವರನ್ನು ಕಾವಲು ನೀಡುತ್ತಿದ್ದರು. (ಸಬ್ಲುಲ್ ಹುದಾ ವರ್ರಶಾದ್, ಸಂಪುಟ-4, ಪುಟ-374-375, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರ್‌ರತ್ ಮುಸ್ಲೆಹ್ ಮೌಊದ್(ರ.ಅ) ಹೇಳುತ್ತಾರೆ: ಹಝ್ರ್‌ರತ್ ಪೈಗಂಬರ್(ಸ)ರ ಧೈರ್ಯ ಮತ್ತು ಮುಸಲ್ಮಾನರ ಹಿತಚಿಂತನೆ ಹೇಗಿತ್ತೆಂದರೆ ಅವರು(ಸ) ಚಳಿಗಾಲದಲ್ಲಿ ರಾತ್ರಿಯ ಸಮಯದಲ್ಲಿ ಎದ್ದೆದ್ದು ಆ ಸ್ಥಳಕ್ಕೆ ಹೋಗಿ ಕಾವಲು ಕಾಯುತ್ತಿದ್ದರು. ಹಝ್ರ್‌ರತ್ ಆಯಿಷಾ(ರ) ಹೇಳುತ್ತಾರೆ, ಹಝ್ರ್‌ರತ್ ಪೈಗಂಬರ್(ಸ)ರು ಕಾವಲು ಕಾಯುತ್ತಿರುವಾಗ ಅವರು ಆಯಾಸಗೊಂಡರು ಮತ್ತು ಚಳಿಯಿಂದಾಗಿ ಬಹಳ ಆಯಾಸವಾದಾಗ ಅವರು ಹಿಂದಿರುಗಿ ಬಂದು ನನ್ನ ಜೊತೆ ಗಾದಿಯಲ್ಲಿ ಸ್ವಲ್ಪ ಹೊತ್ತು ಮಲಗುತ್ತಿದ್ದರು ಹೀಗೆ ದೇಹ ಬೆಚ್ಚಗಾದ ಕೂಡಲೇ ಕಂದಕದ ಬಿರುಕನ್ನು ರಕ್ಷಿಸಲು ಹೋಗುತ್ತಿದ್ದರು. ಹೀಗೆ ಸತತವಾಗಿ  ಕವಲು ನೀಡುವುದರಿಂದ ಅವರು ಒಂದು ದಿನ ಎಷ್ಟು ಆಯಾಸಗೊಂಡಿದ್ದರು ಎಂದರೆ, ಅವರು ಹೀಗೆ ಹೇಳಿದರು: ಕಾವಲು ನಿಲ್ಲಲು ಯಾರಾದರೂ ನಿಷ್ಠಾವಂತ ಮುಸ್ಲಿಮ್ ವ್ಯಕ್ತಿ ಇರುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಆಗ ಸಅದ್ ಬಿನ್ ವಖಾಸ್(ರ) ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಾನು ನಿಮ್ಮ ಸಂರಕ್ಷಣೆಗಾಗಿ ಕಾವಲು ನಿಲ್ಲುತ್ತೇನೆ. ಹಝ್ರ್‌ರತ್ ಪೈಗಂಬರ್(ಸ) ಹೀಗೆ ಹೇಳಿದರು: ನನಗೆ ಕಾವಲುಗಾರನ ಅಗತ್ಯವಿಲ್ಲ, ನೀವು ನಾನು ಹೇಳುವ ಜಾಗಕ್ಕೆ ಹೋಗು, ಅಲ್ಲಿ ಕಂದಕದ ದುರ್ಬಲವಾದ ಒಂದು ಭಾಗವಿದೆ. ಅಲ್ಲಿಗೆ ಹೋಗಿ ಕಾವಲು ನಿಲ್ಲು. ಆಗ ಸಅದ್ ಆ ಜಾಗದಲ್ಲಿ ಕಾವಲು ಕಾಯಲು ಹೋದರು ಹೀಗೆ ಹಝ್ರ್‌ರತ್ ಪೈಗಂಬರ್(ಸ)ರು ನಿದ್ರಿಸಿದರು. (ಇದರ ವಿಶ್ಲೇಷಣೆಯು ಇನ್ನೊಂದು ಕಡೆ ಹೀಗೆ ಮಾಡಲಾಗಿದೆ ಆರಂಭಿಕ ಕಾಲದಲ್ಲಿ ಅವರು ಮದೀನಕ್ಕೆ ಬಂದಾಗ ಆ ಕಾಲದಲ್ಲಿ ಬಹಳ ಅಪಾಯಕಾರಿ ಸನ್ನಿವೇಶಗಳು ಉದ್ಭವಿಸಿದವು ಆದಗೂ ಸಅದ್(ರ) ಕಾವಲು ಕಾಯಲು ಮುಂದಾದರು) ಈ ಕಾಲದಲ್ಲಿಯು ಹಝ್ರ್‌ರತ್ ಪೈಗಂಬರ್(ಸ)ರು ಆಯುಧಗಳ ಸದ್ದು ಕೇಳಿಸಿಕೊಂಡಾಗ ಯಾರು? ಎಂದು ಪ್ರಶ್ನಿಸಿದರು, ಅದಕ್ಕೆ ಅಬ್ಬಾದ್ ಬಿನ್ ಬಿಶರ್(ರ)" ಹಝ್ರ್‌ರತ್ ಮುಸ್ಲೆಹ್ ಮೌಊದ್(ರ) ರವರು ಇಲ್ಲಿ 'ಅಬ್ಬಾದ್ ಬಿನ್ ಬಶೀರ್' ಎಂದು ಬರೆದಿದ್ದಾರೆ. ನೀವು ಅಬ್ಬಾದ್ ಬಿನ್ ಬಶೀರ್ ಎಂದು ಹೇಳಿದ್ದರಿಂದ, ಅನ್ವಾರುಲ್ ಉಲೂಮ್‌ನ ಇಪ್ಪತ್ತನೇ ಸಂಪುಟದಲ್ಲಿ, ಈ ಹೆಸರನ್ನು ಅಬ್ಬಾದ್ ಬಿನ್ ಬಶೀರ್ ಎಂದು ಬರೆಯಲಾಗಿದೆ ಇದು ತಪ್ಪಾಗಿ ಬರೆಯಲಾಗಿದೆ, ಆದಾಗ್ಯೂ, ಅನ್ವಾರುಲ್ ಉಲೂಮ್‌ನಲ್ಲಿ ಈ ಪಠ್ಯವನ್ನು ಸೀರತ್ ಅಲ್-ಹಲ್ಬಿಯಾಹ್‌ನಿಂದ ಉಲ್ಲೇಖಿಸಲಾಗಿದೆ ಮತ್ತು ಸೀರತ್ ಅಲ್‌ಹಲಬೀಯಾದಲ್ಲಿ ಅವರ ಹೆಸರು ಅಬ್ಬಾದ್ ಬಿನ್ ಬಿಶರ್ ಎಂದು ಬರೆಯಲಾಗಿದೆ. ನಾನು ಈ ವಿವರಣೆಯನ್ನು

ನೀಡುತ್ತಿದ್ದೇನೆ ಏಕೆಂದರೆ ಕೆಲವರು ನಂತರ ನನಗೆ ಬರೆಯುತ್ತಾರೆ, ಆ ಸ್ಥಳದಲ್ಲಿ ಹೀಗೆ ಬರೆಯಲಾಗಿದೆ, ನೀವು ಇದನ್ನು ಹೀಗೆ ಹೇಳಿದ್ದೀರಿ. ಯಾವುದು ಸರಿ? ಆದ್ದರಿಂದ, ಯಾವುದೇ ಸಂದರ್ಭದಲ್ಲಿ, ಅಬ್ಬಾದ್ ಬಿನ್ ಬಿಶರ್ ನಿಜವಾದ ಹೆಸರಾಗಿದೆ, ಇದನ್ನು ಅಬ್ಬಾದ್ ಬಿನ್ ಬಶೀರ್ ಎಂದು ತಪ್ಪಾಗಿ ಬರೆದಿರಬಹುದು. ಆದಾಗ್ಯೂ, ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ ಅಬ್ಬಾದ್ ಬಿನ್ ಬಶೀರ್ ಹೇಳಿದರು ನಾನು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮೊಂದಿಗೆ ಬೇರೆ ಯಾರಾದರೂ ಇದ್ದಾರೆಯೇ? ಅದಕ್ಕೆ ಅವರು ಹೇಳಿದರು: ಪೈಗಂಬರ್(ಸ)ರ ಡೇರೆಯನ್ನು ಕಾವಲು ಕಾಯಲು ಬಂದಿರುವ ಸಹಾಬಿಗಳ ಗುಂಪು ಇದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಈ ಸಮಯದಲ್ಲಿ, ಸತ್ಯನಿಷೇಧಿಗಳು ಕಂದಕವನ್ನು ದಾಟಲು ಪ್ರಯತ್ನಿಸುತ್ತಿದ್ದಾರೆ, ಆದ್ದರಿಂದ ಅಲ್ಲಿಗೆ ಹೋಗಿ ಅವರೊಂದಿಗೆ ಹೋರಾಡಿ. ನನ್ನ ಡೇರೆ ಇರಲಿ.

(ದೀಬಾಚಾ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-279) (ಸೀರತ್ ಅಲ್‌ಹಲಬೀಯಾ, ಸಂಪುಟ-3, ಪುಟ-25, ದಾರುಲ್ ಮಾರಿಫ ಬೈರುತ್)

ಈ ಯುದ್ಧದ ವೇಳೆ ಹಝ್ರತ್ ಸಫಿಯ(ರ)ರ ಶೌರ್ಯದ ಘಟನೆಯೂ ವರದಿಯಾಗಿದೆ. ಅದರ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ, ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಧರ್ಮಪತ್ನಿಯರು ಮತ್ತು ಅವರ ತಂದೆಯ ಸಹೋದರಿ ಹಝ್ರತ್ ಸಫಿಯಾ ಬಿಂತ್ ಅಬ್ದುಲ್ ಮುತಲ್ಲಿಬ್(ರ) ಇತರ ಮಹಿಳೆಯರೊಂದಿಗೆ 'ಫಾರಿ' ಎಂಬ ಕೋಟೆಯಲ್ಲಿದ್ದರು. ಬೇರೆ ರೀತಿಯಲ್ಲಿ ಹೇಳುವುದಾದರೆ, ಹಝ್ರತ್ ಪೈಗಂಬರ್(ಸ) ರ ಧರ್ಮಪತ್ನಿಯರು, ಅವರ(ಸ) ತಂದೆಯ ಸಹೋದರಿ, ಹಝ್ರತ್ ಪೈಗಂಬರ್(ಸ)ರ ಆತ್ಮೀಯ ಬಂಧುಗಳು ಮತ್ತು ಇತರ ಮಹಿಳೆಯರೂ ಅಲ್ಲಿ ಆ ಕೋಟೆಯಲ್ಲಿ ಇದ್ದರು. ಹಸ್ಸಾನ್ ಬಿನ್ ಸಾಬಿತ್ ಅಲ್ಲಿ ಉಸ್ತುವಾರಿ ವಹಿಸಿದ್ದರು. ಯಾವಾಗ ಬನೂ ಖುರೈಝಾ ಅವರು ಒಪ್ಪಂದವನ್ನು ಮುರಿಯುವುದಾಗಿ ಘೋಷಿಸಿದರು, ಈಗ ಅಲ್ಲಿನ ಯಹೂದಿಗಳು ಸಹ ಒಂದಲ್ಲ ಒಂದು ರೀತಿಯಲ್ಲಿ ಮುಸ್ಲಿಮರಿಗೆ ಹಾನಿ ಮಾಡುವ ಪ್ರಯತ್ನದಲ್ಲಿ ನಿರತರಾದರು. ಹಝ್ರತ್ ಪೈಗಂಬರ್(ಸ)ರ ಸೋದರತ್ತೆಯಾದ ಹಝ್ರತ್ ಸಫಿಯಾ(ರ) ಹೇಳಿದರು: ಒಮ್ಮೆ ಹತ್ತು ಯಹೂದಿಗಳು ಬಂದು ನಮ್ಮ ಕೋಟೆಯನ್ನು ಯಾವಾಗ ಮತ್ತು ಎಲ್ಲಿಂದ ಪ್ರವೇಶಿಸಬೇಕೆಂದು ಅವಕಾಶವನ್ನು ಹುಡುಕುತ್ತಿದ್ದರಂತೆ ನಮ್ಮ ಕೋಟೆಯ ಸುತ್ತಲೂ ಸುತ್ತುವರಿಯುತ್ತಿದ್ದರು. ಅಷ್ಟರಲ್ಲಿ ಒಬ್ಬ ಯಹೂದಿ ಕೋಟೆಯ ಗೋಡೆಯ ಹತ್ತಿರ ಬಂದನು. ನಾನು ಅವನನ್ನೇ ನೋಡುತ್ತಿದ್ದೆ. ನಾನು ಹಸ್ಸಾನ್‌ಗೆ ಹೇಳಿದೆ: ಓ ಹಸ್ಸಾನ್! ಅಲ್ಲಿಗೆ ಹೋಗಿ ಈ ಯಹೂದಿಯನ್ನು ಎದುರಿಸಿ, ಅದಕ್ಕೆ ಹಸ್ಸಾನ್ ಹೇಳಿದರು, ಓ ಅಬ್ದುಲ್ ಮುತ್ತಲಿಬನ ಮಗಳೇ! ಅಲ್ಲಾಹನ ಆಣೆ! ನನಗೆ ಈ ಧೈರ್ಯವಿದ್ದರೆ ನಾನು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹೋಗುತ್ತಿದ್ದೆ. ಹಝುದರತ್ ಸಫಿಯಾ(ರ) ಹೇಳುತ್ತಾರೆ: ಹಸ್ಸಾನ್ ಹೀಗೆ ಹೇಳಿದಾಗ, ನಾನು ಅಲ್ಲಿಂದ ಮರದ ತುಂಡನ್ನು ಹಿಡಿದು, ಕೋಟೆಯಿಂದ ಕೆಳಗಿಳಿದು, ಆ ವ್ಯಕ್ತಿಯ ತಲೆಗೆ ಎಷ್ಟು ಬಲದಿಂದ ಹೊಡೆದೆ ಎಂದರೆ ಅದು ಅವನ ತಲೆಯನ್ನು ಸೀಳಿತು ಅವನು ಅಲ್ಲೇ ಸತ್ತು ಹೋದನು. ನಾನು ಹಿಂತಿರುಗಿ ಬಂದು ಹಸ್ಸಾನ್ ಅನ್ನು ಹೇಳಿದೆ, ಕೆಳಗಿಳಿದು ಅವನ ಸರಕು ಸಾಮಾನು ಇತ್ಯಾದಿಗಳನ್ನು ತರಲು ಹೇಳಿದೆ, ಅಂದರೆ ಅವನ ಬಳಿ ಏನಿದೆ, ನೀನು ಯುದ್ಧ ಸಂಪತ್ತಾಗಿ ತರಬೇಕು. ಅದಕ್ಕೆ ಹಸ್ಸಾನ್ ಹೇಳಿದರು, ಓ ಅಬ್ದುಲ್ ಮುತ್ತಲಿಬನ ಮಗಳೇ! ನನಗೆ ಅವನ ವಸ್ತುಗಳು ಅಗತ್ಯವಿಲ್ಲ. ಅದಕ್ಕೆ ನಾನು ಅವರಿಗೆ ಹೇಳಿದೆ: ಅವನ ಕಲೆ ಕತ್ತರಿಸಿ ಯಹೂದೀಯರ ಬಳಿಗೆ ಎಸೆಯಿರಿ ಹೀಗೆ ಮಾಡುವುದರಿಂದ ಅವರು ಭಯಪಡುತ್ತಾರೆ ಮತ್ತು ಈ ಕಡೆಗೆ ತಿರುಗುವುದಿಲ್ಲ. ಹಝ್ರತ್ ಹಸ್ಸಾನ್(ರ) ನನಗೆ ಧೈರ್ಯವಿಲ್ಲ ಎಂದು ಹೇಳಲು ಪ್ರಾರಂಭಿಸಿದರು, ಆದ್ದರಿಂದ ಸಫಿಯಾ ಅವನ ತಲೆಯನ್ನು ಕತ್ತರಿಸಿ ಯಹೂದಿಗಳ ಕಡೆಗೆ ಎಸೆದಳು. (ನಂತರ ಅವರು ಸ್ವತಃ ಅಲ್ಲಿ ಹೋಗಿ, ಆ ವ್ಯಕ್ತಿಯ ತಲೆಯನ್ನು ಕತ್ತರಿಸಿ ಗೋಡೆಯ ಮೇಲೆ ಎಸೆದಳು) ಇದನ್ನು ನೋಡಿ ಯಹೂದಿಗಳು ಭಯಭೀತರಾದರು ಮತ್ತು ಹೇಳಿದರು, ಮುಹಮ್ಮದ್ (ಸ) ಅವರನ್ನು ಮಹಿಳೆಯರನ್ನು ಒಂಟಿಯಾಗಿ ಬಿಡಲು ಸಾಧ್ಯವಿಲ್ಲ ಎಂದು ನಮಗೆ ತಿಳಿದಿತ್ತು, ಖಂಡಿತವಾಗಿಯೂ ಅವರ ಸಂಗಡ ಇಲ್ಲಿ ಕಾವಲುಗಾರರು ಇದ್ದಾರೆ. ಮತ್ತು ಆ ಜನರು ಅಲ್ಲಿಂದ ಓಡಿಹೋದರು. ಹಝ್ರತ್ ಪೈಗಂಬರ್(ಸ) ಅವರಿಗೆ ಈ ಬಗ್ಗೆ ತಿಳಿಸಿದಾಗ, ಅವರು ಪುರುಷರಿಗೆ ಒಂದು ಪಾಲು ನಿಗದಿಪಡಿಸಿದಂತೆಯೇ ಹಝ್ರತ್ ಸಫಿಯಾ(ರ) ಅವರಿಗೆ ಯುದ್ಧ ಸಂಪತ್ತಿನಿಂದ ಪಾಲನ್ನು ನಿಗದಿಪಡಿಸಿದರು. (ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟಗಳು 371-372, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಸೀರತ್ ಖಾತಮನ್ನಬಿಯೀನ್(ಸ)ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಮಹಿಳೆಯರನ್ನು ಮತ್ತು ಮಕ್ಕಳನ್ನು ಪಟ್ಟಣದಲ್ಲಿ ಕೋಟೆಯಂತಹ ಒಂದು ವಿಶಿಷ್ಟ ಭಾಗದಲ್ಲಿ ಇರಿಸಲಾಗಿತ್ತು. ಆದರೆ ಅವರನ್ನು ರಕ್ಷಿಸುವುದಕ್ಕಾಗಿ ಸಾಕಷ್ಟು ಮುಸ್ಲಿಮರನ್ನು ಬಿಡಲು ಸಾಧ್ಯವಿರಲಿಲ್ಲ ಮತ್ತು ವಿಶೇಷವಾಗಿ ಯುದ್ಧಭೂಮಿಯಲ್ಲಿ ಶತ್ರುಗಳ ದಾಳಿಯು ತೀವ್ರವಾಗಿದ್ದಾಗ, ಮುಸ್ಲಿಂ ಮಹಿಳೆಯರು ಮತ್ತು ಮಕ್ಕಳನ್ನು ಸಂಪೂರ್ಣವಾಗಿ ಅಸುರಕ್ಷಿತ ಸ್ಥಿತಿಯಲ್ಲಿ ಬಿಡಲಾಯಿತು, ಮತ್ತು ಯುದ್ಧ ಮೈದಾನದಲ್ಲಿ ಹೋಗಲು ಯೋಗ್ಯರಲ್ಲದ ಪುರುಷರನ್ನು ಅವರ ಸಂರಕ್ಷಣೆಗಾಗಿ ಉಳಿಸಲಾಗಿತ್ತು. ಆದ್ದರಿಂದ, ಯಹೂದಿಯರು ಒಂದು ಸಂದರ್ಭದಲ್ಲಿ ಗೂಢಚರ್ಯೆಗಾಗಿ ಒಂದು ವ್ಯಕ್ತಿಯನ್ನು ಆ ಪ್ರದೇಶಕ್ಕೆ ಕಳುಹಿಸಿದರು. ಆ ಸಮಯದಲ್ಲಿ ಮಹಿಳೆಯರ ಬಳಿ ಸಹಾಬಿಯಾದ ಹಸ್ಸಾನ್ ಬಿನ್ ಸಾಬಿತ್(ರ) ಮಾತ್ರವಿದ್ದರು. ಆ ಶತ್ರುವಾದ ಯಹೂದಿ ವ್ಯಕ್ತಿಯನ್ನು ಇಂತಹ ಸಂಶಯಾಸ್ಪದ ಸ್ಥಿತಿಯಲ್ಲಿ ತಮ್ಮ ತಂಗುದಾಣದ ಆಸುಪಾಸಿನಲ್ಲಿ ಸುತ್ತಾಡುತ್ತಾ ಇರುವುದಾಗಿ ಮಹಿಳೆಯರು ಕಂಡಾಗ ಆತನನ್ನು ವಧಿಸಲು ಹಝ್ರತ್ ಪೈಗಂಬರ್(ಸ)ರ ಸೋದರತ್ತೆಯಾದ ಸಫಿಯ ಬಿನ್ತ್ ಅಬ್ದುಲ್ ಮುತಲ್ಲಿಬ್(ರ) ಹಸ್ಸಾನ್(ರ)ರೊಡನೆ ಹೇಳಿದರು. ಈ ವ್ಯಕ್ತಿ ಯಹೂದಿಯಾಗಿದ್ದಾನೆ ಮತ್ತು ಗೂಢಚರ್ಯೆ ಮತ್ತು ಕಿಡಿಗೇಡಿತನಕ್ಕಾಗಿ ಇಲ್ಲಿ ತಿರುಗಾಡುತ್ತಿದ್ದಾನೆ ಅವನು ಹಿಂತಿರುಗಿ ಯಾವುದೇ ಪ್ರಲೋಭನೆಗೆ ಬಲಿಯಾಗದಂತೆ ಅವನನ್ನು ಕೊಲ್ಲಬಿಡಿ. ಆದರೆ ಆತನನ್ನು ವಧಿಸಲು ಹಸ್ಸಾನ್(ರ) ಧೈರ್ಯಪಡಲಿಲ್ಲ. ಆಗ ಹಝ್ರತ್ ಸಫಿಯ(ರ) ಸ್ವತಃ ಮುಂದಕ್ಕೆ ಬಂದು ಆ ಯಹೂದಿಯೊಡನೆ ಹೋರಾಡಿ ಆತನನ್ನು ವಧಿಸಿದರು ಮತ್ತು ಮುಸ್ಲಿಮ್ ಮಹಿಳೆಯರ ಮೇಲೆ ದಾಳಿ ನಡೆಸಲು ಯಹೂದಿಯರಿಗೆ ಧೈರ್ಯ ಉಂಟಾಗದಿರಲು ಹಾಗೂ ಅವರ ಸಂರಕ್ಷಣೆಗಾಗಿ ಅಲ್ಲಿ ಸಾಕಷ್ಟು ಪುರುಷರು ಇದ್ದಾರೆ ಎಂದು ಭಾವಿಸುವಂತಾಗಲು ಆತನ ತಲೆಯನ್ನು ಕತ್ತರಿಸಿ ಯಹೂದಿಯರ ಕಡೆಗೆ ಎಸೆದರು. ಹೀಗೆ ಈ ತಂತ್ರ ಫಲಪ್ರದವಾಯಿತು ಮತ್ತು ಯಹೂದಿಯರು ಭಯಗೊಂಡು ಮರಳಿ ಹೋದರು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-590-591)

ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಸಹ ಇದನ್ನು ವಿವರಿಸಿದ್ದಾರೆ. ಅವರು(ರ) ಹೇಳುತ್ತಾರೆ: "ಬನೂ ಖುರೈಝಾ, ಅವರನ್ನು ಅವಕಾಶ ಲಭಿಸಿದಾಗ ಮುಸ್ಲಿಮರ ಅನುಮಾನಗಳನ್ನು ಹುಟ್ಟುಹಾಕದೆ ಮದೀನಾದಲ್ಲಿ ಪ್ರವೇಶಿಸಿ ಮಹಿಳೆಯರನ್ನು ಮತ್ತು ಮಕ್ಕಳನ್ನು ಕೊಲ್ಲಲು ಅವಕಾಶಕ್ಕಾಗಿ ಕಾಯುತ್ತಿದ್ದರು. ಹೀಗಿರುವಾಗ ಒಂದು ದಿನ ಬನೂ ಖುರೈಝಾ ಅವರು ಮಹಿಳೆಯರು ಮತ್ತು ಮಕ್ಕಳು ಒಬ್ಬಂಟಿಯಾಗಿ ಇದ್ದಾರೆಯೇ ಅಥವಾ ಅವರ ರಕ್ಷಣೆಗೆ ಹೆಚ್ಚಿನ ಸಂಖ್ಯೆಯ ಸೈನಿಕರನ್ನು ನಿಯೋಜಿಸಲಾಗಿದೆಯೇ ಎಂದು ಕಂಡುಹಿಡಿಯಲು ಗೂಢಚಾರರನ್ನು ಕಳುಹಿಸಿದರು. ಗೂಢಚಾರರು ಶತ್ರುಗಳಿಂದ ಹೆಚ್ಚಿನ ಅಪಾಯದಲ್ಲಿದ್ದ ವಿಶೇಷ ಕುಟುಂಬಗಳನ್ನು ಒಟ್ಟುಗೂಡಿಸಿದ ವಿಶೇಷ ಕೋಟೆಗೆ ಬಂದರು ಮತ್ತು ಮುಸ್ಲಿಂ ಸೈನಿಕರು ಎಲ್ಲೋ ಅಡಗಿಕೊಂಡಿದ್ದಾರೆಯೇ ಎಂದು ನೋಡಲು ಸುತ್ತಮುತ್ತಲೂ ನೋಡಲಾರಂಭಿಸಿದರು. ಹಝ್ರತ್ ಪೈಗಂಬರ್(ಸ) ಅವರ ತಂದೆಯ ಸೋದರಿ ಹಝ್ರತ್ ಸಫಿಯಾ(ರ) ಅವರನ್ನು ನೋಡಿದರು. ಪ್ರಾಸಂಗಿಕವಾಗಿ, ಆ ಸಮಯದಲ್ಲಿ ಒಬ್ಬ ಮುಸ್ಲಿಂ ವ್ಯಕ್ತಿ ಮಾತ್ರ ಅಲ್ಲಿ ಹಾಜರಿದ್ದರು ಮತ್ತು ಅವರು ಸಹ ಅನಾರೋಗ್ಯದಿಂದ ಬಳಲುತ್ತಿದ್ದರು. ಹಝ್ರತ್ ಸಫಿಯಾ(ರ) ಅವರಿಗೆ ಹೇಳಿದರು, ಈ ವ್ಯಕ್ತಿ ಬಹಳ ಸಮಯದಿಂದ ಮಹಿಳಾ ಪ್ರದೇಶದಲ್ಲಿ ಓಡಾಡುತ್ತಿದ್ದಾನೆ ಮತ್ತು ಅಲ್ಲಿಂದ ಹೊರಡುತ್ತಿಲ್ಲ ಸುತ್ತಮುತ್ತಲೂ ನೋಡುತ್ತಿದ್ದಾನೆ. ಆದ್ದರಿಂದ, ಇವನು ಖಂಡಿತವಾಗಿಯೂ ಗೂಢಚಾರಿಯಾಗಿದ್ದಾನೆ, ಆದ್ದರಿಂದ, ಅವನೊಂದಿಗೆ ಹೋರಾಡಿ, ಇಲ್ಲದಿದ್ದರೆ ಇಲ್ಲಿನ ಇಡೀ ಪರಿಸ್ಥಿತಿಯನ್ನು ಕಂಡುಹಿಡಿದ ನಂತರ ಶತ್ರುಗಳು ಇಲ್ಲಿ ದಾಳಿ ಮಾಡಬಹುದು. ಈ ಅನಾರೋಗ್ಯ ಸಹಾಬಿಯು ಹಾಗೆ ಮಾಡಲು ನಿರಾಕರಿಸಿದರು. ನಂತರ ಹಝ್ರತ್ ಸಫಿಯಾ(ರ) ಸ್ವತಃ ದೊಡ್ಡ ಬಿದಿರನ್ನು ತೆಗೆದುಕೊಂಡು ಈ ವ್ಯಕ್ತಿಯೊಂದಿಗೆ ಹೋರಾಡಿದರು ಮತ್ತು ಇತರ ಮಹಿಳೆಯರ ಸಹಾಯದಿಂದ ಅವರು ಅವನನ್ನು ಕೊಲ್ಲುವಲ್ಲಿ ಯಶಸ್ವಿಯಾದರು. ಅಂತಿಮವಾಗಿ, ಆತನು ಯಹೂದಿಯಾಗಿದ್ದನು ಮತ್ತು ಬನೂ ಖುರೈಝದ ಗುಪ್ತಚರನಾಗಿದ್ದನು ಎಂದು ಅನ್ವೇಷಣೆ ನಡೆಸಿದಾಗ ಗೊತ್ತಾಯಿತು. ಆಗ ಮುಸ್ಲಿಮರು ಇನ್ನಷ್ಟು ಗಾಬರಿಗೊಂಡರು ಮತ್ತು ಈಗ ಮದೀನದ ಈ ಭಾಗವೂ ಸುರಕ್ಷಿತವಲ್ಲವೆಂದು ಅರಿತುಕೊಂಡರು. ಮಹಿಳೆಯರ ಸಂರಕ್ಷಣೆ ಬಹಳ ಮುಖ್ಯವೆಂದು

ಹಝ್ರತ್ ಪೈಗಂಬರ್(ಸ) ಭಾವಿಸಿದರು ಮತ್ತು ಸಾವಿರದ ಇನ್ನೂರು ಸೈನಿಕರಲ್ಲಿ ಐನ್ನೂರು ಸೈನಿಕರನ್ನು ಮಹಿಳೆಯರ ಸಂರಕ್ಷಣೆಗಾಗಿ ಪಟ್ಟಣದಲ್ಲಿ ನೇಮಿಸಿದರು. ಕಂದಕದ ಸಂರಕ್ಷಣೆ ಮತ್ತು ಹದಿನೆಂಟು ಇಪ್ಪತ್ತು ಸಾವಿರ ಸೈನಿಕರನ್ನು ಎದುರಿಸಲು ಕೇವಲ ಏಳು ನೂರು ಸೈನಿಕರು ಬಾಕಿಯುಳಿದಿದ್ದರು. (ದೀಬಾಚಾ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ 274–275)

ಅಮ್ರ್ ಬಿನ್ ಅಬ್ದು ವುದ್ದ್‌ನನ್ನು ಹಝ್ರತ್ ಅಲಿ(ರ) ವಧಿಸಿದ ಘಟನೆಯೂ ವರದಿಯಾಗಿದೆ. ಅದರ ವಿವರಣೆ ಹೀಗಿದೆ: ಸತ್ಯನಿಷೇಧಿಗಳ ಸೈನ್ಯವು ಮದೀನಾವನ್ನು ಮುತ್ತಿಗೆ ಹಾಕುತ್ತಿದ್ದಾಗ ಅವರ ನಾಯಕರು ಒಟ್ಟಾಗಿ ದಾಳಿ ಮಾಡಲು ಒಪ್ಪಿಕೊಂಡರು. ಅವರು ತಮ್ಮ ಕುದುರೆಗಳನ್ನು ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಗಳ ತನಕ ತಲುಪುವುದಕ್ಕೆ ಕಂದಕದಲ್ಲಿ ಕಿರಿದಾದ ಸ್ಥಳವನ್ನು ಹುಡುಕಲಾರಂಭಿಸಿದರು. ಅಂತಿಮವಾಗಿ, ಆ ಜನರು ಮುಸ್ಲಿಮರಿಗೆ ತಿಳಿದಿಲ್ಲದ ಕಿರಿದಾದ ಸ್ಥಳಕ್ಕೆ ತಲುಪಿದರು, ಆದ್ದರಿಂದ ಇಕ್ರಿಮಾ ಬಿನ್ ಅಬು ಜಹ್ಲ್, ನೌಫಲ್ ಬಿನ್ ಅಬ್ದುಲ್ಲಾ ಮತ್ತು ಧೀರಾರ್ ಬಿನ್ ಖತ್ತಾಬ್, ಹುಬೈರಾ ಬಿನ್ ಅಬು ವಹ್ಬ್ ಮತ್ತು ಅಮ್ರ್ ಬಿನ್ ಅಬ್ದಿ ವುದ್ ಆ ಸ್ಥಳದಿಂದ ಕಂದಕವನ್ನು ದಾಟಿದರು. ಅಮ್ರ್ ಬಿನ್ ಅಬ್ದ್–ಇ–ವುದ್ ಎಷ್ಟು ಧೈರ್ಯಶಾಲಿಯಾಗಿದ್ದನೆಂದರೆ, ಅವನನ್ನು ಅರೇಬಿಯಾದಲ್ಲಿ ಸಾವಿರ ಪುರುಷರಿಗೆ ಸಮಾನವೆಂದು ಪರಿಗಣಿಸಲಾಯಿತು. ಇವನು ಬದ್ರ್ ಯುದ್ಧದಲ್ಲಿ ಗಾಯಗೊಂಡನು ಮತ್ತು ಈ ಗಾಯಗಳಿಂದಾಗಿ ಅವನು ಉಹುದ್ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ ಮತ್ತು ಮುಹಮ್ಮದ್(ಸ) ಕೊಲ್ಲುವವರೆಗೂ ಅವನು ತನ್ನ ತಲೆಗೆ ಎಣ್ಣೆ ಹಾಕುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದನು. ನೌಊಝುಬಿಲ್ಲಾಹ್. ಅವನು ಬಹಳ ಅಹಂಕಾರಿಯಾಗಿ ಧ್ವನಿಸಿದನು. ಕಂದಕವನ್ನು ದಾಟಿ ಅಲ್ಲಿಗೆ ಬರುತ್ತಿದ್ದಂತೆಯೇ ಘೋಷವಾಕ್ಯವನ್ನು ಕೂಗಿದನು, ಗಟ್ಟಿ ದನಿ ಎತ್ತಿ ಮುಸ್ಲಿಮರಿಗೆ ಎಲೈ ಸ್ವರ್ಗದ ಅಭಿಲಾಷಿಗಳೇ, ಬನ್ನಿರಿ ನಾನು ನಿಮ್ಮನ್ನು ಸ್ವರ್ಗಕ್ಕೆ ಕಳುಹಿಸುತ್ತೇನೆ ಅಥವಾ ನೀವು ನನ್ನನ್ನು ನರಕಕ್ಕೆ ಕಳುಹಿಸಿರಿ ಎಂದು ಸವಾಲು ಹಾಕಿದನು. ಅವನ ಮುಂದೆ ಯಾರೂ ನಿಲ್ಲದಿದ್ದಾಗ, ಹಝ್ರತ್ ಅಲಿ(ರ) ಎದ್ದೇಳಲು ಬಯಸಿದರು, ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರನ್ನು ಅಲೀ! ಎದುರಿನಲ್ಲಿ ಅಮ್ರ ವದ್ದ್ ಇದ್ದಾನೆ ಎಂದು ಹೇಳಿ ಕುಳಿತುಕೊಳ್ಳುವಂತೆ ಮಾಡಿದರು, ಆದರೆ ಅವನು ಎರಡನೇ ಅಥವಾ ಮೂರನೇ ಬಾರಿಗೆ ಕರೆ ಮಾಡಿದಾಗ, ಹಝ್ರತ್ ಅಲಿ(ರ) ಎದ್ದರು. ನಂತರ ಅವರು(ಸ) ಅವರಿಗೆ ತಡೆಯಲಿಲ್ಲ, ನಂತರ ಹಝ್ರತ್ ಪೈಗಂಬರ್(ಸ)ರು ಅವರ ತಲೆಯ ಮೇಲೆ ತಮ್ಮ ಪೇಟವನ್ನು ಕಟ್ಟಿದರು ಮತ್ತು ಅವರ ಕತ್ತಿಯನ್ನು ಅನುಗ್ರಹಿಸಿದರು ಮತ್ತು ದುಆ ನೀಡುತ್ತಾ ಅವನನ್ನು ಎದುರಿಸಲು ಮುಂದೆ ಕಳುಹಿಸಿದರು. ಹಝ್ರತ್ ಅಲಿ(ರ) ಮುಂದೆ ಹೋಗಿ ಅಮ್ರೊಗೆ ಹೇಳಿದರು. ಖುರೈಷಿಗಳ ಯಾವುದೇ ವ್ಯಕ್ತಿ ನಿಮ್ಮಲ್ಲಿ ಎರಡು ವಿಷಯಗಳನ್ನು ಕೇಳಿದರೆ, ಅದರಲ್ಲಿ ಒಂದನ್ನು ನೀವು ಖಂಡಿತವಾಗಿ ಸ್ವೀಕರಿಸುತ್ತೀರಿ ಎಂದು ನೀವು ಪ್ರತಿಜ್ಞೆ ಮಾಡಿದ್ದೀರಿ ಎಂದು ನಾನು ಕೇಳಿದೆ. ಅದಕ್ಕೆ ಅಮ್ರೊ ಹೌದು ಎಂದ ಹೇಳಿದನು. ಅದಕ್ಕೆ ಹಝ್ರತ್ ಅಲಿ(ರ) ಹೇಳಿದರು, ಹಾಗಾದರೆ ನಾನು ನಿಮಗೆ ಹೇಳುವ ಮೊದಲ ವಿಷಯವೆಂದರೆ ನೀನು ಮುಸ್ಲಿಮನಾಗು ಮತ್ತು ಹಝ್ರತ್ ಪೈಗಂಬರ್(ಸ) ಅವರಿಗೆ ವಿಧೇಯರಾಗು ಮತ್ತು ಅಲ್ಲಾಹನ ಪ್ರತಿಫಲದ ವಾರಸುದಾರನಾಗು. ಇದು ಸಾಧ್ಯವಿಲ್ಲ ಎಂದು ಅಮ್ರ್ ಹೇಳಿದನು. ಹಝ್ರತ್ ಅಲಿ(ರ), ಇದು ಸ್ವೀಕಾರಾರ್ಹವಲ್ಲದಿದ್ದರೆ, ಬನ್ನಿ ನನ್ನೊಂದಿಗೆ ಹೋರಾಡಲು ಸಿದ್ಧರಾಗಿರಿ ಎಂದು ಹೇಳಿದರು. ಅದಕ್ಕೆ ಅಮ್ರ್ ನಗಲು ಪ್ರಾರಂಭಿಸಿದನು ಮತ್ತು ಯಾರಾದರೂ ನನಗೆ ಈ ಮಾತುಗಳನ್ನು ಹೇಳಬಹುದು ಎಂದು ನಾನು ಭಾವಿಸಿರಲಿಲ್ಲ ಎಂದು ಹೇಳಿದನು. ಮತ್ತೆ ಅವನು ಹಝ್ರತ್ ಅಲಿ(ರ) ಅವರ ಹೆಸರು ಮತ್ತು ವಂಶಾವಳಿಯನ್ನು ಕೇಳಿದನು ಮತ್ತು ಅವರು ಅವನಿಗೆ ಹೇಳಿದಾಗ ಅವನು ಹೇಳಿದನು ನಿಮ್ಮ ತಂದೆ ನನ್ನ ಸ್ನೇಹಿತರಾಗಿದ್ದರು ಎಂದು ಹೇಳಿದನು. ಆದ್ದರಿಂದ ನೀವು ಹೋಗಿ ಯಾರಾದರು ಹಿರಿಯರನ್ನು ಕಳುಹಿಸಿ. ಅವನು ಹಝ್ರತ್ ಅಲಿ(ರ) ಅವರಿಗೆ ಹೇಳಿದನು, ಓ ನನ್ನ ಸೋದರಳಿಯ, ನೀವು ಇನ್ನೂ ಚಿಕ್ಕ ವಯಸ್ಸಿನವರಾಗಿದ್ದೀರಿ ನಾನು ನಿಮ್ಮ ರಕ್ತವನ್ನು ಚೆಲ್ಲಲು ಬಯಸುವುದಿಲ್ಲ. ನಿಮ್ಮ ಹಿರಿಯರಲ್ಲಿ ಒಬ್ಬರನ್ನು ಕಳುಹಿಸಿ. ಅದಕ್ಕೆ ಹಝ್ರತ್ ಅಲಿ(ರ) ಹೇಳಿದರು, ನೀವು ನನ್ನ ರಕ್ತವನ್ನು ಚೆಲ್ಲಲು ಬಯಸುವುದಿಲ್ಲ, ಆದರೆ ನಿಮ್ಮ ರಕ್ತವನ್ನು ಚೆಲ್ಲುವುದಕ್ಕೆ ನಾನು ಹಿಂಜರಿಯುವುದಿಲ್ಲ. ಈ ಸಂದರ್ಭದಲ್ಲಿ, ಬಹಳ ಉತ್ಸುಕನಾಗಿ ಅಮ್ರೊ ತನ್ನ ಕುದುರೆಯಿಂದ ಜಿಗಿದು ಅದರ ಕಾಲುಗಳನ್ನು ಕತ್ತರಿಸಿ ಅವನನ್ನು ಕೆಡವಿದನು. ಅವನು ಕುದುರೆಯನ್ನು ಕೊಂದು ಯುದ್ಧಕ್ಕೆ ಇಳಿದನು ಮತ್ತು ನಂತರ ಬೆಂಕಿಯ ಜ್ವಾಲೆಯಂತೆ ಹುಚ್ಚನಾಗಿ ಹಝ್ರತ್ ಅಲಿ(ರ) ಅವರ ಕಡೆಗೆ ಹೋಗಿ ತನ್ನ ಕತ್ತಿಯನ್ನು ಹಝ್ರತ್ ಅಲಿ(ರ) ಅವರ ಮೇಲೆ ಬಹಳ ತೀವ್ರವಾಗಿ ಹೊಡೆದನು ಆ ಕತ್ತಿಯು ಅವರ(ರ) ಗುರಾಣಿಯನ್ನು ಕತ್ತರಿಸಿ ಅವರ ಹಣೆಗೆ ಗಾಯಗೊಳಿಸಿತು ಹೀಗೆ ಅವರಿಗೆ ಸ್ವಲ್ಪ ಗಾಯವಾಯಿತು. ಆದರೆ ಹಝ್ರತ್ ಅಲೀ(ರ)ರವರು ಅಲ್ಲಾಹು ಅಕ್ಬರ್ ಎಂದು ಪಠಿಸುತ್ತಾ ಎಂತಹ ಏಟು ನೀಡಿದರು ಎಂದರೆ ಶತ್ರು ತನ್ನನ್ನು ರಕ್ಷಿಸಿಕೊಳ್ಳುತ್ತಲೇ ಇದ್ದನು ಮತ್ತು ಹಝ್ರತ್ ಅಲಿ(ರ) ಅವರ ಕತ್ತಿಯು ಅವನ ಭುಜದ ಮೇಲೆ ಕೊಯ್ದು ಕೆಳಗೆ ಬಂತು ಹೀಗೆ ಅಮ್ರ್ ಸಂಕಟದಿಂದ ಬಿದ್ದು ಸತ್ತನು.

ಕೆಲವು ವರದಿಗಳಲ್ಲಿ, ಎರಡು ವಿಷಯಗಳ ಬದಲಿಗೆ, ಮೂರು ವಿಷಯಗಳಲ್ಲಿ ಒಂದನ್ನು ಒಪ್ಪಿಕೊಳ್ಳಬೇಕು ಎಂದಾಗಿತ್ತು ಅದರಲ್ಲಿ ಮೊದಲನೆಯ ವಿಷಯವು ನೀನು ಹಿಂದಿರುಗು ಎಂದು ಹೇಳಲಾಗಿತ್ತು ಎಂದು ಹೇಳಲಾಗುತ್ತದೆ. ಹಝ್ರತ್ ಅಲಿ(ರ) ಅವನಿಗೆ ಹೀಗೆ ಹೇಳಿದಾಗ ಅದರಲ್ಲಿ ಅವನು ಹಿಂದಿರುಗಿ ಹೋಗಬೇಕೆಂದು ಹೇಳಿದರು. ಅದಕ್ಕೆ ಅವನು ಅದು ಸಾಧ್ಯವಿಲ್ಲ ಎಂದು ಹೇಳಿದನು. ತದನಂತರ ನೀನು ಮುಸಲ್ಮಾನನಾಗು ಮತ್ತು ಮೂರನೆಯದು ಸ್ಪರ್ಧೆಗೆ ಬರಲು. ಅಮ್ರ್ ಕೊಲ್ಲಲ್ಪಟ್ಟಾಗ, ಅವನ ಉಳಿದ ಸಹಚರರು ಭಯಭೀತರಾಗಿ ತಮ್ಮ ಕುದುರೆಗಳ ಮೇಲೆ ಓಡಿಹೋದರು. ಹಝ್ರತ್ ಝುಬೈರ್(ರ) ಅವರನ್ನು ಹಿಂಬಾಲಿಸಿ ನೌಫಲ್ ಬಿನ್ ಅಬ್ದುಲ್ಲಾನನ್ನು ಕೊಂದರು. ಈ ರೀತಿಯಾಗಿ, ಅವರಲ್ಲಿ ಇನ್ನೊಬ್ಬ, ಹುಬೈರಾ ಬಿನ್ ಅಬು ವಹಬ್, ಇವನು ಹಝ್ರತ್ ಅಲಿ(ರ) ಅವರ ಸಹೋದರಿ ಉಮ್ಮ್ ಹನಿ ಅವರ ಪತಿಯಾಗಿದ್ದರು, ಆದರೆ ಅವರು ಕುದುರೆಯ ಕೊರಳಪಟ್ಟಿ ಕತ್ತರಿಸುವ ರೀತಿಯಲ್ಲಿ ಕತ್ತಿಯಿಂದ ಹೊಡೆದರು. ಮತ್ತೊಂದು ವರದಿಯ ಪ್ರಕಾರ, ಅಮ್ರೊವಿನ ಮರಣದ ನಂತರ, ಹುಬೈರಾ ಮತ್ತು ಝಿರಾರ್ ಬಿನ್ ಖತ್ತಾಬ್ ಹಝ್ರತ್ ಅಲಿ(ರ) ಅವರ ಮೇಲೆ ದಾಳಿ ಮಾಡಿದನು ಆದರೆ ಪ್ರತಿದಾಳಿಯಲ್ಲಿ, ಇಬ್ಬರೂ ಓಡಿಹೋದರು, ಬದಲಿಗೆ ಹುಬೈರಾ ತನ್ನ ರಕ್ಷಾಕವಚವನ್ನು ಸಹ ಬಿಟ್ಟು ಓಡಿಹೋದನು, ಆದರೂ ಹುಬೈರಾನನ್ನು ಖುರೈಶರ ಅತ್ಯುತ್ತಮ ಕುದುರೆ ಸವಾರ ಎಂದು ಪರಿಗಣಿಸಲಾಗಿತ್ತು.

ಒಂದು ವರದಿಯ ಪ್ರಕಾರ, ಹಝ್ರತ್ ಉಮರ್(ರ) ಅವರ ಸಹೋದರರಾಗಿದ್ದ ಝಿರಾರ್ ಬಿನ್ ಖತ್ತಾಬ್ (ಸೀರತ್ ಹಲಬಿಯಾದಲ್ಲಿ ಝಿರಾರ್ ಬಿನ್ ಖತ್ತಾಬ್ ಅನ್ನು ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರ ಸಹೋದರ ಎಂದು ಬರೆಯಲಾಗಿದೆ, ಆದರೆ ಲೇಖಕರು ಗೊಂದಲಕ್ಕೊಳಗಾಗಿದ್ದಾರೆ. ಅವರು ಅವರ ಸಹೋದರ ಆಗಿರಲಿಲ್ಲ) ಅವನು ಓಡಿಹೋದಾಗ ಹಝ್ರತ್ ಉಮರ್(ರ) ಅವರನ್ನು ಹಿಂಬಾಲಿಸಿದರು. ಝಿರಾರ್ ಅಚಾನಕ್ಕಾಗಿ ನಿಂತು ಹಝ್ರತ್ ಉಮರ್(ರ)ರ ಮೇಲೆ ಈಟಿಯಿಂದ ಹಲ್ಲೆ ನಡೆಸಲು ಮುಂದಾಗಿ ದಿಢೀರನೇ ಹಲ್ಲೆ ನಡೆಸುವುದರಿಂದ ಹಿಂದೆ ಸರಿದು ಹಝ್ರತ್ ಉಮರ್(ರ) ಅವರನ್ನು ಉದ್ದೇಶಿಸಿ ಹೀಗೆ ಹೇಳಿದನು: ಉಮರ್! ನಾನು ನಿನ್ನ ಮೇಲೆ ದಾಳಿ ಮಾಡಲಿಲ್ಲ ಎಂಬ ನನ್ನ ಈ ಓದಾರ್ಯವನ್ನು ನೆನಪಿಸಿಕೊಳ್ಳಿ, ಅ ಓದಾರ್ಯದ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಉಮರ್(ರ) ಈ ಓದಾರ್ಯವನ್ನು ಏನು ನೆನಪಿಸಿಕೊಂಡಿರಬಹುದು. ಇದರಲ್ಲಿ ಝಿರಾರ್‌ನ ಔದಾರ್ಯವೇನೂ ಇಲ್ಲ. ಬದಲಾಗಿ ಅಲ್ಲಾಹನ ಔದಾರ್ಯ ಅವನ ಮೇಲೆ ಉಂಟಾಯಿತು ಎಂದು ಹೇಳಬೇಕು. ಅದು ಹೇಗೆಂದರೆ, ಮಕ್ಕಾ ವಿಜಯದ ವೇಳೆ ಇದೇ ಝಿರಾರ್ ಇಸ್ಲಾಂ ಸ್ವೀಕಾರ ಮಾಡಿಕೊಂಡರು. ಇಸ್ಲಾಮಿನ ಯುದ್ಧಗಳಲ್ಲಿ ಪೂರ್ಣವಾಗಿ ಪಾಲ್ಗೊಂಡರು. ಅವರು ಚೆನ್ನಾಗಿ ಶೌರ್ಯದ ಕೌಶಲವನ್ನು ತೋರಿಸಿದರು ಮತ್ತು ಯಮಾಮ ಯುದ್ಧದಲ್ಲಿ ಹುತಾತ್ಮರಾದರು. ಕೆಲವರ ಪ್ರಕಾರ ಅವರು ಶಹೀದ್ ಆಗಿರಲಿಲ್ಲ. ಬದಲಾಗಿ ದೀರ್ಘಕಾಲ ಜೀವಂತರಾಗಿದ್ದರು ಮತ್ತು ಇಸ್ಲಾಂ ಧರ್ಮದಲ್ಲಿ ಇದ್ದುಕೊಂಡು ನಿಧನಗೊಂಡರು. ಅಮ್ರ್ ಬಿನ್ ಅಬ್ದ್–ವುದ್ ಕೊಲ್ಲಲ್ಪಟ್ಟ ನಂತರ, ಅವಿಶ್ವಾಸಿಗಳು ಹಝ್ರತ್ ಪೈಗಂಬರ್(ಸ) ಅವರಿಗೆ ಅವರು ಹತ್ತು ಸಾವಿರ ದಿರ್ಹಮ್‌ಗೆ ಅವನ ಮೃತ ದೇಹವನ್ನು ಖರೀದಿಸುತ್ತಾರೆ ಎಂದು ಸಂದೇಶವನ್ನು ಕಳುಹಿಸಿದರು. ಅದಕ್ಕೆ ಹಝ್ರತ್ ಪೈಗಂಬರ್(ಸ) ಉತ್ತರಿಸಿದರು: ನೀವು ಇದನ್ನು ತೆಗೆದುಕೊಂಡು ಹೋಗಿ ನಾವು ಸತ್ತವರ ಬೆಲೆಯನ್ನು ಸ್ವೀಕರಿಸುವುದಿಲ್ಲ, ಕೆಲವು ವರದಿಗಳ ಪ್ರಕಾರ, ನೌಫಲ್ ಬಿನ್ ಅಬ್ದುಲ್ಲಾ ಅವರನ್ನು ಪ್ರತ್ಯೇಕ ಸಂದರ್ಭದಲ್ಲಿ ಕೊಲ್ಲಲಾಯಿತು. ಅದರ ವಿವರಣೆ ಏನೆಂದರೆ, ಒಂದು ದಿನ ಅವನು ತನ್ನ ಕುದುರೆಯನ್ನು ಸವಾರಿ ಮಾಡಿ ಕಂದಕವನ್ನು ದಾಟಲು ಓಡಿಸಿದನು, ಆದರೆ ಕುದುರೆಯು ಕಂದಕವನ್ನು ದಾಟಲು ಸಾಧ್ಯವಾಗಲಿಲ್ಲ ಮತ್ತು ಸವಾರನ ಜೊತೆಗೆ ಕಂದಕಕ್ಕೆ ಬಿದ್ದಿತು, ಇದರ ಪರಿಣಾಮವಾಗಿ ಸರ್ವಶಕ್ತನಾದ ಅಲ್ಲಾಹನು ಅವನನ್ನು ಕೊಂದನು ಏಕೆಂದರೆ ಅವನು ಕಂದಕದಲ್ಲಿ ಬಿದ್ದು ಆತನ ಕತ್ತಿನ ಮೂಳೆ ಮುರಿಯಿತು.

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಪುಟ 588–589) (ಅಲ್–ಬದಯಾ ವನ್ನಹಾಯಾ, ಸಂಪುಟ–2, ಭಾಗ–4, ಪುಟ–115, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸಬ್ಲುಲ್ ಹುದಾ, ಸಂಪುಟ–4, ಪುಟಗಳು 377–378, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸೀರತ್ ಅಲ್–ಹಲ್ಬಿಯಾ, ಸಂಪುಟ–3, ಪುಟ–20, ದಾರುಲ್ ಮಾರಿಫಾ ಬೈರುತ್) (ತಬಕಾತುಲ್ ಕುಬ್ರ, ಭಾಗ–2, ಪುಟ–283, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಫಜ್ವಾಹ್ ಅಹ್‌ಝಾಬ್, ಬಾಶ್ಮಿಲ್, ಪುಟ–225, ನಫೀಸ್ ಅಕಾಡೆಮಿ ಕರಾಚಿ) (ಅಲ್–ಅಸಾಬಾ ಫೀ ತಮೀಝಿಸ್ಸಹಾಬ, ಸಂಪುಟ–03, ಪುಟ–392, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ ಲೆಬನಾನ್ 1995)

ಬಹುದೇವತಾವಾದಿಗಳು ಅವರ ಮೃತದೇಹವನ್ನು ಪಡೆಯಲು ತಮ್ಮ ನಿಯೋಗವನ್ನು ಕಳುಹಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರಿಗೆ ಪರಿಹಾರಧನವನ್ನು ಅರ್ಪಿಸಿದಾಗ ಹುಝೂರ್(ಸ) ಹೇಳಿದರು, ನಮಗೆ ಅವನ ಪರಿಹಾರಧನದ ಅಗತ್ಯವಿಲ್ಲ ಮತ್ತು ಅವನನ್ನು ಸಮಾಧಿ ಮಾಡಲು ನಾವು ತಡೆಯುವುದಿಲ್ಲ." (ಸಬ್ಲುಲ್ ಹುದಾ ವ ರ್‌ಶಾದ್, ಸಂಪುಟ–4, ಪುಟ–380, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಅವರು ನೌಫಲ್‌ನ ಹತ್ಯೆಯ ಘಟನೆಯನ್ನು ಈ ರೀತಿ ವಿವರಿಸಿದ್ದಾರೆ: ಕಂದಕದ ಮೇಲೆ ದಾಳಿ ಮಾಡುತ್ತಿದ್ದ ಶತ್ರುಗಳು ಕೆಲವೊಮ್ಮೆ ಅದನ್ನು ದಾಟುವಲ್ಲಿ ಯಶಸ್ವಿಯಾಗುತ್ತಿದ್ದರು. ಹೀಗೆ ಒಂದು ದಿನ, ಸತ್ಯನಿಷೇಧಿಗಳ ಕೆಲವು ಮಹಾನ್ ಸೇನಾಪತಿಗಳು ಕಂದಕವನ್ನು ದಾಟಿ ಇನ್ನೊಂದು ಬದಿಗೆ ಬರಲು ಯಶಸ್ವಿಯಾದರು, ಆದರೆ ಮುಸ್ಲಿಮರು ಎಷ್ಟು ಉಗ್ರವಾಗಿ ದಾಳಿ ಮಾಡಿದರು ಎಂದರೆ ಅವರಿಗೆ ಹಿಂತಿರುಗುವುದನ್ನು ಬಿಟ್ಟು ಬೇರೆ ದಾರಿಯಿರಲಿಲ್ಲ. ಹೀಗೆ ಅದೇ ಸಮಯದಲ್ಲಿ, ಕಂದಕವನ್ನು ದಾಟುವಾಗ, ನೌಫಲ್ ಎಂಬ ಸತ್ಯನಿಷೇಧಿಯ ಮಹಾನ್ ನಾಯಕನನ್ನು ಕೊಲ್ಲಲಾಯಿತು. ಅವನ ಮೃತದೇಹ ನಾಶವಾದರೆ ಅರೇಬಿಯಾದಲ್ಲಿ ನಮಗೆ ಮುಖ ತೋರಿಸಲು ಜಾಗವಿಲ್ಲ ಎಂದು ಅವಿಶ್ವಾಸಿಗಳು ಭಾವಿಸಿದರು. ಆತನ ಶವಶರೀರವನ್ನು ಬಿಟ್ಟುಕೊಡಲು ಸತ್ಯನಿಷೇಧಿಗಳು ಹಝ್ರತ್ ಪೈಗಂಬರ್(ಸ)ರಿಗೆ ಸಂದೇಶ ಕಳುಹಿಸಿದರು. ಆತನ ಶವಶರೀರವನ್ನು ಮರಳಿ ಕೊಟ್ಟರೆ ಹತ್ತು ಸಾವಿರ ದಿರ್ಹಂ ಹಝ್ರತ್ ಪೈಗಂಬರ್(ಸ)ರಿಗೆ ನೀಡಲು ತಯಾರಿರುವರು ಎಂದು ಅವರು ಹೇಳಿದರು. ಯಾವ ರೀತಿಯಲ್ಲಿ ಅವರು ಮುಸ್ಲಿಂ ಮುಖಂಡರ ಮತ್ತು ಸ್ವತಃ ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪರ ಮೂಗು ಮತ್ತು ಕಿವಿಗಳನ್ನು ಉಹುದ್ ಯುದ್ಧದಲ್ಲಿ ಕತ್ತರಿಸಿದರೋ ಹಾಗೆಯೇ ಬಹುಶಃ ಮುಸ್ಲಿಮರು ಕೂಡ ಅವರ ಮುಖಂಡರ ಮೂಗು ಮತ್ತು ಕಿವಿಗಳನ್ನು ಕತ್ತರಿಸಿ ಅವರ ಕೋಮನ್ನು ನಿಂದಿಸುವರು ಎಂದು ಶತ್ರುಗಳು ಭಾವಿಸಿದ್ದರು. ಆದರೆ ಇಸ್ಲಾಮಿನ ಆದೇಶಗಳು ಸಂಪೂರ್ಣವಾಗಿಯೂ ಬೇರೆ ರೀತಿಯದ್ದಾಗಿದ್ದುವು. ಮೃತಶರೀರವನ್ನು ನಿಂದಿಸಲು ಇಸ್ಲಾಂ ಅನುಮತಿ ನೀಡುವುದಿಲ್ಲ. ಸತ್ಯನಿಷೇಧಿಗಳ ಸಂದೇಶ ಹಝ್ರತ್ ಪೈಗಂಬರ್(ಸ)ರಿಗೆ ತಲುಪಿದಾಗ ಅವರು ಹೀಗೆ ಹೇಳಿದರು: ಈ ಶವಶರೀರವನ್ನು ನಾವೇನೂ ಮಾಡುವುದು? ಇದಕ್ಕೆ ಬದಲಾಗಿ ನಿಮ್ಮಿಂದ ಬೆಲೆಯನ್ನು ಪಡೆಯುವಂಥದ್ದಾಗಿ ಇದರಲ್ಲಿ ಏನಿದೆ? ಈ ಶವಶರೀರವನ್ನು ಖುಶಿಯಿಂದ ತೆಗೆದುಕೊಂಡು ಹೋಗಿರಿ. ನಮಗೆ ಇದರೊಂದಿಗೆ ಯಾವುದೇ ಸಂಬಂಧವಿಲ್ಲ. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವರುಲ್ ಉಲೂಮ್, ಸಂಪುಟ–20, ಪುಟಗಳು 277–278)

ಆದಾಗ್ಯೂ, ಇದರ ಹೆಚ್ಚಿನ ವಿವರಗಳು ಮುಂದುವರಿಸಲಾಗುವುದು, ಇನ್‌ಶಾಅಲ್ಲಾಹ್.

ಈ ವಾರ ಇಂದಿನಿಂದ ಉಪಸಂಸ್ಥೆಗಳಾದ ಲಜ್ನಾ ಮತ್ತು ಅನ್ಸಾರ್‌ಗಳ ಇಜ್‌ತಿಮಾಗಳು ಕೂಡ ಪ್ರಾರಂಭವಾಗುತ್ತಿದೆ. ನಾನು ಖುದ್ದಾಮರಿಗೆ ಹೇಳಿದಂತೆ, ಈ ದಿನಗಳಲ್ಲಿ ವಿಶೇಷವಾಗಿ ಬಹಳಷ್ಟು ಸಮಯ ಪ್ರಾರ್ಥನೆಗಳಲ್ಲಿ ತಲ್ಲೀನರಾಗಿರಿ. ದುರೂದ್ ಹೇಳುವುದರ ಕುರಿತು ಗಮನ ನೀಡಿರಿ.

ಅಲ್ಲಾಹನು ನಿಮಗೆಲ್ಲರಿಗೂ ಅದರ ಸೌಭಾಗ್ಯ ನೀಡಲಿ. ಇಜ್ತಿಮಾದ ಉದ್ದೇಶವನ್ನು ಈಡೇರಿಸಲು ಪ್ರಯತ್ನಿಸಿರಿ. ಕೇವಲ ಮನೋರಂಜಕ ಕಾರ್ಯಕ್ರಮಗಳಲ್ಲಿ ಅಥವಾ ಮಾತುಗಾರಿಕೆಯಲ್ಲಿ ಸಮಯ ಕಳೆಯದಿರಿ. ಅಲ್ಲಾಹನು ಎಲ್ಲ ವಿಧದಲ್ಲೂ ಇದನ್ನು ಅನುಗ್ರಹೀತಗೊಳಿಸಲಿ.

**(ಅಲ್–ಫಝುಲ್ ಇಂಟರ್‌ನ್ಯಾಶನಲ್, ಅಕ್ಟೋಬರ್ 18, 2024, ಪುಟ 2–6)**

————————*****————————

ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಇಷ್ಟಪಡುವುದಿಲ್ಲ. ಬದಲಿಗೆ ಅವನು ಸ್ಪಷ್ಟವಾಗಿ ಹೇಳಿದನು. **ಲೈಸ ಲಿಲ್ ಇನ್ಸಾನಿ ಇಲ್ಲಾ ಮಾ ಸಆ** (ಅನ್ನಜ್ಮ್–40) ಆದ್ದರಿಂದ ಸತ್ಯವಿಶ್ವಾಸಿಯೊಬ್ಬನಿಗೆ ಕಾರ್ಯಾಶೀಲರಾಗಿರಬೇಕಾಗಿದೆ. ಆದರೆ ಮತ್ತೊಮ್ಮೆ ಮಗದೊಮ್ಮೆ ಸಾಧ್ಯವಾದಷ್ಟು ಫಲ ಹೇಳುವೆನು ಲೌಕಿಕತೆಯೇ ಗುರಿಯಾಗಿರಬಾರದು ಧರ್ಮವೇ ಗುರಿಯಾಗಿರಬೇಕು. ಲೌಕಿಕತೆಯೂ ಧರ್ಮದ ಆಳಾಗಿ ಸೇರಿಸಿಕೊಳ್ಳಬೇಕು ಶ್ರೀಮಂತರಿಗೆ ಇಂತಹ ಹೆಚ್ಚಿನ ಅವಕಾಶ ದೊರೆಯುತ್ತದೆ ಆದರೆ ಬಡಬಗ್ಗರಿಗೆ ಇಂತಹ ಅವಕಾಶಗಳು ದೊರೆಯುವುದಿಲ್ಲ. ರಸೂಲುಲ್ಲಾಹ್(ಸ) ರವರ ಕಾಲದಲ್ಲಿ ಪ್ರಥಮ ಖಲೀಫರಿಗೆ ಅವರು ಉತ್ತಮ ದರ್ಜೆಯ ವ್ಯಾಪಾರಿಯಾಗಿದ್ದರು. ಅದ್ವಿತೀಯ ಸಹಕಾರ ನೀಡಿದ್ದಾರೆ. ಅದರ ಫಲವಾಗಿ ಅವರಿಗೆ **"ಸಿದ್ದೀಖ್"** ಎಂಬ ಪದವಿ ದೊರೆಯಿತು. ಮತ್ತು ಅವರು ಮೊದಲು ಸ್ನೇಹಿತರಾದರು, ಮತ್ತೆ ಪ್ರಥಮ ಖಲೀಫರಾದರು. **(ಮಲ್ಫೂಝಾತ್, ಸಂಪುಟ 1, ಪುಟ 494, ಮುದ್ರಣ 2018 ಖಾದಿಯಾನ್)**

————————*****————————

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝೂರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರುತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

# ಖುತ್‌ಬ ಜುಮುಅ

**ಅಲ್ಲಾಹುಮ್ಮ ಮುನ್‌ಝಿಲಲ್ ಕಿತಾಬಿ ಸರೀಉಲ್ ಹಿಸಾಬಿ ಇಹ್‌ಝಿಮಿಲ್ ಅಹ್‌ಝಾಬ, ಅಲ್ಲಾಹುಮ್ಮಹ್‌ಝಿಮ್‌ಹುಮ್ ವನ್‌ಸುರ್‌ನಾ ಅಲೈಹಿಮ್–** ಹೇ ಅಲ್ಲಾಹ್, ಗ್ರಂಥವನ್ನು ಅವತೀರ್ಣಗೊಳಿಸಿದವನೇ, ವೇಗವಾಗಿ ಲೆಕ್ಕ ತೆಗೆಯುವವನೇ, ನೀನು ಬೇಗನೇ ಶತ್ರು ಸೇನೆಯನ್ನು ಸೋಲಿಸು. ಹೇ ಅಲ್ಲಾಹ್, ನೀನು ಅವರನ್ನು ಪರಾಜಿತಗೊಳಿಸು ಮತ್ತು ಅವರ ವಿರುದ್ಧವಾಗಿ ನಮಗೆ ನೆರವು ನೀಡು.

ಒಂದು ದಿನ ದಾಳಿಯು ಎಷ್ಟು ತೀವ್ರವಾಯಿತು ಎಂದರೆ ಕೆಲವು ಮುಸ್ಲಿಮರ ನಮಾಝ್‌ಗಳನ್ನು ನಿಗದಿತ ಸಮಯಕ್ಕೆ ನಿರ್ವಹಿಸಲಾಗಲಿಲ್ಲ, ಇದರಿಂದ ಹಝ಼್ರತ್ ಪೈಗಂಬರ್(ಸ)ರಿಗೆ ಎಷ್ಟು ದುಃಖವಾಗಿತ್ತು ಎಂದರೆ, ಅವರು ಹೀಗೆ ಹೇಳಿದರು: ಅಲ್ಲಾಹನು ಸತ್ಯನಿಷೇಧಿಗಳಿಗೆ ಶಿಕ್ಷೆ ನೀಡಲಿ. ಅವರು ನಮ್ಮ ನಮಾಝನ್ನು ಪೋಲು ಮಾಡಿದರು........ ಇದರಿಂದ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೈತಿಕ ಗುಣಗಗಳ ಬಗ್ಗೆ ಆಳವಾದೊಂದು ಬೆಳಕು ಬೀರುತ್ತಿದೆ. ಹಝ಼್ರತ್ ಪೈಗಂಬರ್(ಸ)ರಿಗೆ ಲೋಕದಲ್ಲಿ ಅತ್ಯಂತ ಪ್ರಿಯವಾದ ಸಂಗತಿ ಶತ್ರುಗಳು ಮದೀನಾವನ್ನು ಎಲ್ಲಾ ಕಡೆಯಿಂದ ಸುತ್ತುವರೆದಿರುವಾಗಲೂ ಅಲ್ಲಾಹನ ಆರಾಧನೆಯಾಗಿತ್ತು ಎಂದು ಇದರಿಂದ ತಿಳಿದು ಬರುತ್ತದೆ.

ಈ ಅಪಾಯಕಾರಿ ದಿನಗಳಲ್ಲಿಯೂ ಸಹ, ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಈ ಐದು ನಮಾಝ್‌ಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ನಿರ್ವಹಿಸುತ್ತಿದ್ದರು ಮತ್ತು ಒಂದು ದಿನ ಶತ್ರುಗಳ ತೀವ್ರ ದಾಳಿಯಿಂದಾಗಿ, ನೀವು ನಿಮ್ಮ ಪರಿಪಾಲಕನಾದ ಅಲ್ಲಾಹನ ಹೆಸರನ್ನು ತೃಪ್ತಿ ಮತ್ತು ಸೌಕರ್ಯದೊಂದಿಗೆ ನಿಗದಿತ ಸಮಯದಲ್ಲಿ ತೆಗೆದುಕೊಳ್ಳಲು ಸಾಧ್ಯವಾಗದಿದ್ದರಿಂದ ಅವರಿಗೆ(ಸ) ಬಹಳ ಗಂಭೀರವಾಗಿ ಸಂಕಟವುಂಟಾಯಿತು.

**ಖಂದಕ್ ಯುದ್ಧದ ದೃಷ್ಟಿಕೋನದಲ್ಲಿ ಹಝ್‌ರತ್ ಪೈಗಂಬರ್(ಸ)ರ ಜೀವನ ಚರಿತ್ರೆಯ ವಿಶ್ವಾಸವರ್ಧಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **04–10–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಖುತ್ಬಗಳಲ್ಲಿ ಇತ್ತೀಚಿಗೆ ಅಹ್‌ಝಾಬ್ ಯುದ್ಧದ ಪ್ರಸ್ತಾಪ ನಡೆಯುತ್ತಿತ್ತು. ಅಹ್‌ಝಾಬ್ ಯುದ್ಧದ ಇನ್ನಷ್ಟು ವಿವರಣೆ ಹೀಗಿದೆ: ಕಂದಕವನ್ನು ಪಾರು ಮಾಡಿಯೂ ಸತ್ಯ ನಿಷೇಧಿಗಳಿಗೆ ಯಾವುದೇ ಯಶಸ್ಸು ಲಭಿಸದೇ ಬಂದಾಗ ಮತ್ತು ಹೀನಾಯ ಸೋಲು ಅನುಭವಿಸಬೇಕಾಗಿ ಬರಬಹುದು ಎಂದು ಕಂಡಾಗ ಎಲ್ಲರೂ ಒಟ್ಟಾಗಿ ಬೆಳಿಗ್ಗಿನ ಸಮಯದಲ್ಲಿ ದಾಳಿ ನಡೆಸಲು ತೀರ್ಮಾನಿಸಿದರು. ಮತ್ತು ಸೂರ್ಯೋದಯಕ್ಕೆ ಮುಂಚಿತವಾಗಿ ಅವರು ಹಝ್‌ರತ್ ಪೈಗಂಬರ್(ಸ)ರ ಮುಂದೆ ಕಂದಕಕ್ಕೆ ಬಂದು ಸೇರಿದರು. ಸತ್ಯನಿಷೇಧಿಗಳು ಎಲ್ಲಾ ಕಡೆಯಿಂದ ಕಂದಕವನ್ನು ಸುತ್ತುವರೆದರು ಮತ್ತು ಹಝ್‌ರತ್ ಪೈಗಂಬರ್(ಸ)ರ ಡೇರೆಯ ಕಡೆಗೆ ಒಂದು ಸೈನ್ಯವನ್ನು ಕಳುಹಿಸಿದರು. ಆ ಸೈನ್ಯದಲ್ಲಿ ಖಾಲಿದ್ ಬಿನ್ ವಲೀದ್ ಕೂಡ ಇದ್ದರು. ಕಂದಕವನ್ನು ಪದೇ ಪದೇ ಪಾರು ಮಾಡುವುದರ ಜೊತೆಗೆ ಬಿಲ್ಲುಗಾರಿಕೆಯೂ ನಡೆಯಿತು. ಮುಸ್ಲಿಮರ ಕಡೆಯಿಂದ ಯಾವುದಾದರೂ ರೀತಿಯ ಅಸಡ್ಡೆ ನಡೆಯಲಿಕ್ಕೆ ಸತ್ಯನಿಷೇಧಿಗಳು ಕಾಯುತ್ತಿದ್ದರು. ಈ ದಾಳಿಗಳು ಮತ್ತು ಪ್ರಯತ್ನಗಳು ಎಡೆಬಿಟ್ಟು ನಡೆಯುತ್ತಲೇ ಇದ್ದುವು. ಇದೇ ವೇಳೆ ತುಫೈಲ್ ಬಿನ್ ನುಅ್‌ಮಾನ್ ಅಥವಾ ತುಫೈಲ್ ಬಿನ್ ಮಾಲಿಕ್ ಬಿನ್ ನುಅ್‌ಮಾನ್ ಅನ್ಸಾರಿ(ರ)ರನ್ನು ವಹ್‌ಶಿ ಬಿನ್ ಹರಬ್ ತನ್ನ ಕಿರು ಈಟಿಯಿಂದ ತಿವಿದು ಶಹೀದ್ ಮಾಡಿದನು. ಹಝ಼್ರತ್ ಸಅದ್ ಬಿನ್ ಮುಆಧ಼್(ರ)ರಿಗೂ ಬಾಣ ತಗುಲಿತು ಮತ್ತು ಅವರು ಗಾಯಗೊಂಡರು. ಇದೇ ಗಾಯದ ಕಾರಣದಿಂದ ಕೆಲವು ದಿನಗಳ ನಂತರ ಅವರು ಹುತಾತ್ಮರಾದರು. (ಸ'ಬ್ಲುಲ್ ಹುದಾ ವರ್‌ಶಾದ್, ಸಂಪುಟ–4, ಪುಟ–380, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್) (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–7, ಪುಟ–345, ದಾರುಸ್ಸಲಾಮ್)

ಮುಸ್ಲಿಮರು ಅತಿಯಾಗಿ ಕಾರ್ಯನಿರತರಾಗಿದ್ದ ಕಾರಣದಿಂದ ಮತ್ತು ಅತಿಯಾದ ದಾಳಿಯ ಕಾರಣದಿಂದ ನಮಾಝನ್ನು ಸರಿಯಾದ ಸಮಯದಲ್ಲಿ ನಿರ್ವಹಿಸಲು ಕಷ್ಟವಾದ ದಿನಗಳು ಇದೇ ಆಗಿದ್ದುವು. ನಂತರದ ನಿರೂಪಕರು ಈ ವಿಷಯಗಳನ್ನು ಸರಿಯಾಗಿ ಸಂರಕ್ಷಿಸಲಿಲ್ಲ ಮತ್ತು ಸ್ವಲ್ಪ ಸಮಯದ ನಂತರ ಆ ದಿನ ಹಝ್‌ರತ್ ಪೈಗಂಬರ್(ಸ)ರು ಸೇರಿದಂತೆ ಮುಸ್ಲಿಮರು ಸೂರ್ಯ ಮುಳುಗುವವರೆಗೆ ಝುಹ್ರ್ ನಮಾಝ್ ಅಥವಾ ಅಸರ್ ನಮಾಝ್ ನಿರ್ವಹಿಸಲಿಲ್ಲ ಮತ್ತು ಈ ನಮಾಝ್‌ಗಳನ್ನು ಸೂರ್ಯಾಸ್ತದ ನಂತರ ನಿರ್ವಹಿಸಲಾಯಿತು. ಸಾಮಾನ್ಯವಾಗಿ ಹೀಗೂ ಒಂದು ಕಥೆಯನ್ನು ಹೇಳಲಾಗುತ್ತದೆ.

ಮುಸ್ಲಿಮರು ಝುಹ್ರ್ ಮತ್ತು ಅಸ್ರ್ ನಮಾಝುಗಳನ್ನು ನಿರ್ವಹಿಸುವಂತೆ ಅಲ್ಲಾಹನು ಅಸ್ತಮಿಸಿದ ಸೂರ್ಯನನ್ನು ಹಿಂದಕ್ಕೆ ಕಳುಹಿಸಿದ್ದಾನೆ ಎಂದು ಕೆಲವು ಇತಿಹಾಸಕಾರರು ಉತ್ಪ್ರೇಕ್ಷೆ ಮಾಡಿದ್ದಾರೆ, ಆದರೆ ಇದು ವಾಸ್ತವವಲ್ಲ. ಆ ದಿನಗಳು ಬಹಳ ಕಷ್ಟಕರವಾದ ದಿನಗಳಾಗಿದ್ದವು ಎಂಬುದರಲ್ಲಿ ಸಂದೇಹವಿಲ್ಲ. ಹಝ್‌ರತ್ ಪೈಗಂಬರ್(ಸ) ಸೇರಿದಂತೆ ಎಲ್ಲಾ ಮುಸ್ಲಿಮರು ನಿರಂತರ ದಾಳಿಗೆ ಒಳಗಾಗಿದ್ದರು, ಆದರೆ ಅವರೆಲ್ಲರಿಗೂ, ವಿಶೇಷವಾಗಿ ಹಝ್‌ರತ್ ಪೈಗಂಬರ್(ಸ)ರಿಗೆ ಯಾವುದೇ ನಮಾಝ್ ನಿರ್ವಹಿಸಲು ಸಾಧ್ಯವಾಗಲಿಲ್ಲ ಎಂದಲ್ಲ. ಅವರು ಆ ದಿನವೂ ನಮಾಝ್‌ಗಳನ್ನು ನಿರ್ವಹಿಸುವುದನ್ನು ಮುಂದುವರೆಸಿದರು, ಆದರೆ ಈ ನಮಾಝ್‌ಗಳನ್ನು ನಿರಂತರ ಭಯ ಮತ್ತು ಆತಂಕದ ಸ್ಥಿತಿಯಲ್ಲಿ ನಿರ್ವಹಿಸಲಾಯಿತು ಮತ್ತು ಅದನ್ನು ಕೊನೆಯ ಸಮಯದಲ್ಲಿ ನಿರ್ವಹಿಸಿರಬಹುದು.

ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಸೀರತ್ ಖಾತಮನ್ನಬಿಯೀನ್ ನಲ್ಲಿ ಈ ರೀತಿ ವಿವರಿಸಿದ್ದಾರೆ: "ಆ ದಿನ, ಮುಸ್ಲಿಮರ ಎಲ್ಲಾ ನಮಾಝ್‌ಗಳನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸಲಿಲ್ಲ ಎಂದು ಹೇಳುವುದು ಸರಿಯಲ್ಲ." ನಮಾಝ್‌ಗಳನ್ನು ನಿರ್ವಹಿಸಲಿಲ್ಲ ಎಂದು ಹೇಳುವುದು ಸರಿಯಲ್ಲ, "ಬದಲಿಗೆ ಅಧಿಕೃತ ವರದಿಗಳಿಂದ ಸಾಬೀತಾಗಿರುವಂತೆ, ಅಷ್ಟರ ತನಕ ಸಲಾತುಲ್ ಖೌಫ್ ಎಂದರೆ ಭಯದ ಸ್ಥಿತಿಯಲ್ಲಿ ನಿರ್ವಹಿಸಲ್ಪಡುವ ನಮಾಝಿನ ಬಗ್ಗೆ ದೈವಿಕ ಆದೇಶ ಬಂದಿರಲಿಲ್ಲ. ಸತತವಾದ ಅಪಾಯ ಮತ್ತು ಬಿಡುವಿಲ್ಲದ ಸ್ಥಿತಿಯಲ್ಲಿ ಕೇವಲ ಒಂದು ನಮಾಝ್, ಎಂದರೆ ಅಸರ್ ನಮಾಝನ್ನು ತಡವಾಗಿ ನಿರ್ವಹಿಸಲಾಗಿತ್ತು. ಅದನ್ನು ಮಗ್‌ರಿಬ್‌ನೊಂದಿಗೆ ನಿರ್ವಹಿಸಲಾಯಿತು. ಕೆಲವು ವರದಿಗಳ ಪ್ರಕಾರ ಕೇವಲ ಝುಹರ್ ಮತ್ತು ಅಸರ್ ನಮಾಝ್‌ಗಳನ್ನು ತಡವಾಗಿ ನಿರ್ವಹಿಸಲಾಗಿತ್ತು ಎಂದು ಹೇಳಲಾಗಿದೆ.

(ಸೀರತ್ ಖಾತಮನ್ನಬಿಯೀನ್(ಸ), ಹಝ್‌ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ–588)

ನಮಾಝ್ ನಿಗದಿತ ಸಮಯದಲ್ಲಿ ನಿರ್ವಹಿಸದೇ ಇದ್ದ ಬಗ್ಗೆ ಹಝ಼್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

"ಒಂದು ದಿನ ದಾಳಿಯು ಎಷ್ಟು ತೀವ್ರವಾಯಿತು ಎಂದರೆ ಕೆಲವು

ಮುಸ್ಲಿಮರ ನಮಾಝ್‌ಗಳನ್ನು ನಿಗದಿತ ಸಮಯಕ್ಕೆ ನಿರ್ವಹಿಸಲಾಗಲಿಲ್ಲ, ಇದರಿಂದ ಹಝ್ರತ್ ಪೈಗಂಬರ್(ಸ)ರಿಗೆ ಎಷ್ಟು ದುಃಖವಾಗಿತ್ತು ಎಂದರೆ, ಅವರು ಹೀಗೆ ಹೇಳಿದರು: ಅಲ್ಲಾಹನು ಸತ್ಯನಿಷೇಧಿಗಳಿಗೆ ಶಿಕ್ಷೆ ನೀಡಲಿ. ಅವರು ನಮ್ಮ ನಮಾಝನ್ನು ಪೋಲು ಮಾಡಿದರು........ ಇದರಿಂದ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೈತಿಕ ಗುಣಗಗಳ ಬಗ್ಗೆ ಆಳವಾದೊಂದು ಬೆಳಕು ಬೀರುತ್ತಿದೆ. ಹಝ್ರತ್ ಪೈಗಂಬರ್(ಸ)ರಿಗೆ ಲೋಕದಲ್ಲಿ ಅತ್ಯಂತ ಪ್ರಿಯವಾದ ಸಂಗತಿ ಶತ್ರುಗಳು ಮದೀನಾವನ್ನು ಎಲ್ಲಾ ಕಡೆಯಿಂದ ಸುತ್ತುವರೆದಿರುವಾಗಲೂ ಅಲ್ಲಾಹನ ಆರಾಧನೆಯಾಗಿತ್ತು ಎಂದು ಇದರಿಂದ ತಿಳಿದು ಬರುತ್ತದೆ. ಮದೀನದ ಪುರುಷರು ಪ್ರತ್ಯೇಕವಾಗಿದ್ದರೂ, ಈ ಮಹಿಳೆಯರು ಮತ್ತು ಮಕ್ಕಳ ಪ್ರಾಣವೂ ಅಪಾಯದಲ್ಲಿತ್ತು. ಶತ್ರುಗಳು ಮದೀನಾದಲ್ಲಿ ಯಾವ ಕಡೆಯಿಂದಲೂ ಪ್ರವೇಶಿಸಬಹುದು ಎಂದು ಮದೀನಾದ ಜನರ ಹೃದಯಗಳು ಸದಾ ಮಿಡಿಯುತ್ತಿದ್ದಾಗ, ಆ ಸಮಯದಲ್ಲೂ ಹಝ್ರತ್ ಪೈಗಂಬರ್(ಸ)ರ ಆಶಯವು ಸರ್ವಶಕ್ತನಾದ ಅಲ್ಲಾಹನನ್ನು ನಿಗದಿತ ಸಮಯದಲ್ಲಿ ಶ್ರೇಷ್ಠತೆಯಿಂದ ಆರಾಧಿಸಬೇಕು ಎಂದಾಗಿತ್ತು." ಅಂದರೆ, ವಿಪರೀತ ಭಯದ ಸ್ಥಿತಿಯಲ್ಲಿಯೂ, ಆರಾಧನೆಯು ಎಲ್ಲೋ ಕಳೆದುಹೋಗಬಾರದು ಎಂಬುದು ಹಝ್ರತ್ ಪೈಗಂಬರ್(ಸ)ರ ಬಯಕೆಯಾಗಿತ್ತು. "ಮುಸ್ಲಿಮರು ಯಹೂದಿಗಳು, ಕ್ರಿಶ್ಚಿಯನ್ನರು ಮತ್ತು ಹಿಂದೂಗಳಂತೆ ವಾರದಲ್ಲಿ ಒಂದು ದಿನ ಆರಾಧನೆ ಮಾಡುವುದಿಲ್ಲ, ಬದಲಿಗೆ ಮುಸ್ಲಿಮರು ಹಗಲು ರಾತ್ರಿ ಐದು ಬಾರಿ ಆರಾಧಿಸುತ್ತಾರೆ. ಅಂತಹ ಅಪಾಯಕಾರಿ ಸಮಯದಲ್ಲಿ, ಒಬ್ಬ ವ್ಯಕ್ತಿಯು ದಿನಕ್ಕೆ ಒಂದು ಬಾರಿ ನಮಾಝ್ ನಿರ್ವಹಿಸುವುದೂ ಬಹಳ ಕಷ್ಟವಾಗುತ್ತದೆ, ಐದು ಹೊತ್ತು ಅದೂ ಶ್ರೇಷ್ಠತೆಯಿಂದ ಬಾಜಮಾಅತ್ ನಮಾಝ್ ನಿರ್ವಹಿಸುವುದು ಕಷ್ಟ. ಆದರೆ ಈ ಅಪಾಯಕಾರಿ ದಿನಗಳಲ್ಲಿಯೂ ಸಹ, ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಈ ಐದು ನಮಾಝ್‌ಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ನಿರ್ವಹಿಸುತ್ತಿದ್ದರು ಮತ್ತು ಒಂದು ದಿನ ಶತ್ರುಗಳ ತೀವ್ರ ದಾಳಿಯಿಂದಾಗಿ, ನೀವು ನಿಮ್ಮ ಪರಿಪಾಲಕನಾದ ಅಲ್ಲಾಹನ ಹೆಸರನ್ನು ತೃಪ್ತಿ ಮತ್ತು ಸೌಕರ್ಯದೊಂದಿಗೆ ನಿಗದಿತ ಸಮಯದಲ್ಲಿ ತೆಗೆದುಕೊಳ್ಳಲು ಸಾಧ್ಯವಾಗದಿದ್ದರಿಂದ ಅವರಿಗೆ(ಸ) ಬಹಳ ಗಂಭೀರವಾಗಿ ಸಂಕಟವುಂಟಾಯಿತು." (ದೀಬಾಚಾ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-273-274)

ಎಲ್ಲ ನಮಾಝ್‌ಗಳನ್ನು ರಾತ್ರಿ ಸಮಯದಲ್ಲಿ ಒಟ್ಟಿಗೆ ನಿರ್ವಹಿಸಿದ ಪ್ರಸ್ತಾಪವಿರುವ ಎಲ್ಲ ವರದಿಗಳು ದುರ್ಬಲವೆಂದು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವರು. ಮತ್ತು ಕೇವಲ ಅಸರ್ ನಮಾಝ್ ಅನ್ನು ತಡವಾಗಿ ನಿರ್ವಹಿಸಲಾಯಿತು ಎಂಬ ಹದೀಸನ್ನು ಸರಿ ಎಂದು ಹೇಳಿರುವರು.

ಆದ್ದರಿಂದ, ಕಂದಕದ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಅವರ ನಾಲ್ಕು ನಮಾಝ್‌ಗಳ ಬಗ್ಗೆ ಓರ್ವ ಪಾದ್ರಿಯ ಆಕ್ಷೇಪಣೆಗೆ ಉತ್ತರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಕಂದಕವನ್ನು ಅಗೆಯುವ ಸಮಯದಲ್ಲಿ ನಾಲ್ಕು ನಮಾಝ್‌ಗಳನ್ನು ಒಟ್ಟುಗೂಡಿಸಲಾಯಿತು ಎಂಬ ಮೂರ್ಖತನ ಹಾಗೂ ಭ್ರಮೆಯ ಉತ್ತರವೆಂದರೆ ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ: ಧರ್ಮದಲ್ಲಿ ಯಾವುದೇ ಹಾನಿ ಇಲ್ಲ, ಅಂದರೆ ಮನುಷ್ಯನ ನಾಶಕ್ಕೆ ಕಾರಣವಾಗುವ ಯಾವುದೇ ಬಲವಂತವಿಲ್ಲ. ಅದಕ್ಕಾಗಿಯೇ ಅಲ್ಲಾಹನು ಅಗತ್ಯವಿರುವ ಸಮಯದಲ್ಲಿ ಮತ್ತು ಆತಂಕಗಳ ಸ್ಥಿತಿಯಲ್ಲಿ ನಮಾಝ್‌ಗಳನ್ನು ಒಟ್ಟುಗೂಡಿಸಲು ಮತ್ತು ಮೊಟಕುಗೊಳಿಸಲು ಆದೇಶಿಸಿದ್ದಾನೆ, ಆದರೆ ಯಾವುದೇ ಪ್ರಬಲವಾದ ಹದೀಸಿನಲ್ಲಿ ನಾಲ್ಕೂ ನಮಾಝ್‌ಗಳನ್ನು ಒಟ್ಟಾಗಿ ನಿರ್ವಹಿಸಿದ ಬಗ್ಗೆ ಪ್ರಸ್ತಾಪವಿಲ್ಲವೆಂದು ಅವರು ಹೇಳಿರುವರು. ಒಂದು ನಮಾಝ್, ಎಂದರೆ ಅಸರ್ ನಮಾಝ್ ಸಾಧಾರಣಕ್ಕಿಂತ ಸ್ವಲ್ಪ ತಡವಾಗಿ ನಿರ್ವಹಿಸಲಾಗಿತ್ತು ಎಂದು ಸಹೀಹ್ ಬುಖಾರಿಯ ವ್ಯಾಖ್ಯಾನ ಗ್ರಂಥವಾದ ಫತಹುಲ್‌ಬಾರಿಯಲ್ಲಿ ಬರೆಯಲಾಗಿದೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರರೆ: "ಈ ಸಮಯದಲ್ಲಿ ನೀವು ನಮ್ಮೆದುರು ಇರುತ್ತಿದ್ದರೆ ನಿಮ್ಮನ್ನು ಮುಂದೆ ಕೂರಿಸಿ ಇದು ಎಲ್ಲಿಂದ ಬಂತು ಎಂದು ಕೇಳುತ್ತಿದ್ದೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಈ ವಿರೋಧಿಯನ್ನು ಉದ್ದೇಶಿಸಿ ಹೇಳುತ್ತಿದ್ದಾರೆ, ನೀವು ನಮ್ಮೆದುರು ಇರುತ್ತಿದ್ದರೆ ನೀವು ಈ ವರದಿಯನ್ನು ಎಲ್ಲಿಂದ ಪಡೆದಿದ್ದೀರಿ ಎಂದು ಪ್ರಶ್ನಿಸುತ್ತಿದ್ದೆವು." ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನಾಲ್ಕು ನಮಾಝ್‌ಗಳು ತಪ್ಪಿಹೋದವು ಎಂಬುದು ಸರ್ವಾನ್ನುಮತವಾಗಿದೆಯೇ? ಷರಿಯಾದ ಪ್ರಕಾರ ನಾಲ್ಕು ನಮಾಝ್‌ಗಳನ್ನು ಒಟ್ಟುಗೂಡಿಸಬಹುದು, ಅಂದರೆ ಝುಹ್ರ್ ಮತ್ತು ಅಸ್ರ್. ಮತ್ತು ಮಗ್ರಿಬ್ ಮತ್ತು ಇಶಾ. ಹೌದು, ಝುಹ್ರ್, ಅಸ್ರ್, ಮಗ್ರಿಬ್ ಮತ್ತು ಇಶಾವನ್ನು ಒಟ್ಟಿಗೆ ನಿರ್ವಹಿಸುವ ದುರ್ಬಲ ವರದಿ ಇದೆ, ಆದರೆ ಇತರ ಅಧಿಕೃತ ಹದೀಸ್‌ಗಳು ಇದನ್ನು ತಿರಸ್ಕರಿಸುತ್ತವೆ ಮತ್ತು ಅಸ್ರ್ ನಮಾಝ್ ಅನ್ನು ಸಾಧಾರಣಕ್ಕಿಂತ ಸ್ವಲ್ಪ ತಡವಾಗಿ ನಿರ್ವಹಿಸಲಾಗಿತ್ತು ಎಂದು ಸಾಬೀತುಪಡಿಸುತ್ತದೆ." (ನೂರ್ ಅಲ್-ಖುರ್‌ಆನ್ ಸಂಖ್ಯೆ-2, ರೂಹಾನಿ ಖಝಾಇನ್, ಸಂಪುಟ-9, ಪುಟ-390)

ಆದಾಗ್ಯೂ, ಇಡೀ ದಿನದ ಎಲ್ಲಾ ನಮಾಝ್‌ಗಳನ್ನು ಒಟ್ಟುಗೂಡಿಸಲಾಗಿಲ್ಲ ಎಂಬುದು ಸ್ಪಷ್ಟವಾಗಿದೆ, ಆದರೆ ಅಸ್ರ್ ಅನ್ನು ಸಾಧಾರಣಕ್ಕಿಂತ ಸ್ವಲ್ಪ ತಡವಾಗಿ ನಿರ್ವಹಿಸಲಾಗಿತ್ತು ಮತ್ತು ಹಝ್ರತ್ ಪೈಗಂಬರ್(ಸ) ಅವರಿಗೆ ನಿಗದಿತ ಸಮಯದಲ್ಲಿ ಸರಿಯಾದ ರೀತಿಯಲ್ಲಿ ನಮಾಝ್ ನಿರ್ವಹಿಸಲು ಸಾಧ್ಯವಾಗಲಿಲ್ಲ ಎಂದು ವಿಷಾದಿಸಿದರು.

ಅಹ್‌ಝಾಬ್ ಯುದ್ಧದ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಕಂದಕದ ಯುದ್ಧವು ಮುಸ್ಲಿಮರಿಗೆ ನರಗಳು ಉರಿಯುವ ರೀತಿಯ ಯುದ್ಧವಾಗಿತ್ತು. ಯುದ್ಧದ ಭಯದ ಜೊತೆಗೆ ಹಸಿವು ಮತ್ತು ಹವಾಮಾನದ ತೀವ್ರತೆಯೂ ಹೆಚ್ಚಾಗಿತ್ತು. ಆ ಸಮಯದಲ್ಲಿ, ಅವರು ಬಹಳ ಸಮಯದವರೆಗೆ ಹಸಿವಿನಿಂದ ಬಳಲುತ್ತಿದ್ದರು. ಇದೇ ಸಂದರ್ಭದಲ್ಲಿ ಒಂದು ಅದೃಶ್ಯ ನೆರವು ಹೀಗೆ ಸಂಭವಿಸಿತು, ತಮ್ಮ ಪ್ರೀತಿಪಾತ್ರರಲ್ಲಿ ಒಬ್ಬರನ್ನು ದಫನ್ ಮಾಡಲು ಹೊರಟಿದ್ದ ಮುಸ್ಲಿಮರ ಶಸ್ತ್ರಸಜ್ಜಿತ ಗುಂಪಿಗೆ ಬನೂ ಖುರೈಝಾರ ಕಡೆಗೆ ಹೋಗುತ್ತಿದ್ದ ಇಪ್ಪತ್ತು ಒಂಟೆಗಳನ್ನು ಹುಯ್ಯಿ ಬಿನ್ ಅಖ್ತಾಬ್‌ನ ಶಿಫಾರಸು ಮತ್ತು ವಿಶೇಷ ಪ್ರಯತ್ನದಿಂದ ಈ ಪಡಿತರವನ್ನು ಮಕ್ಕಾಗೆ ಕಳುಹಿಸಲಾಗುತ್ತಿತ್ತು ಅದು ಇವರಿಗೆ ಲಭಿಸಿತು. ಒಂದು ಸಣ್ಣ ಚಕಮಕಿಯ ನಂತರ, ಅವರು ಈ ಎಲ್ಲಾ ಒಂಟೆಗಳನ್ನು ತಮ್ಮ ಅದೀನದಲ್ಲಿ ಪಡೆದುಕೊಂಡರು ಮತ್ತು ಹಝ್ರತ್ ಪೈಗಂಬರ್(ಸ)ರ ಸೇವೆಗೆ ಅರ್ಪಿಸಿದರು. ಕಂದಕ್‌ನ ಜನರು ಅದರಿಂದ ತಿನ್ನುತ್ತಿದ್ದರು ಮತ್ತು ಈ ಒಂಟೆಗಳಲ್ಲಿ ಕೆಲವು ವಧೆ ಮಾಡಲಾಯಿತು ಮತ್ತು ಕೆಲವು ಉಳಿದವುಗಳು ಯುದ್ಧದ ಕೊನೆಯಲ್ಲಿ ಮುಸ್ಲಿಮರು ಮದೀನಾಕ್ಕೆ ಕರೆದೊಯ್ದರು. ಖುರೈಶಿ ಸೇನಾಧಿಪತಿಯಾದ ಅಬುಸುಫ್ಯಾನ್ ಈ ಸುದ್ದಿಯನ್ನು ಪಡೆದಾಗ, ಹುಯ್ಯ್ ಎಷ್ಟು ದುಷ್ಟ ಎಂದು ಸಾಬೀತಾಗಿದೆ ಎಂದು ಹೇಳಿದನು. ಈಗ ನಾವು ಹಿಂದಿರುಗಬೇಕಾದರೆ ನಮ್ಮ ಸರಕು ಸಾಮಾನುಗಳನ್ನು ಒಯ್ಯಲು ಪ್ರಾಣಿಗಳೂ ಇಲ್ಲ. (ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟ-382, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) ಯುದ್ಧದ ಸ್ಥಿತಿಯಲ್ಲಿ, ಇದನ್ನು ಅನುಮತಿಸಲಾಗಿದೆ. ಅವರು ಸುತ್ತುವರಿದಿದ್ದರಂತೆ. ಇದರಲ್ಲಿ, ಅವರು ಅವರ ಪಡಿತರವನ್ನು ವಶಪಡಿಸಿಕೊಂಡರೆ, ಅದು ಸಂಪೂರ್ಣವಾಗಿ ಅನುಮತಿಸಲಾಗಿದೆ.

ಹಝ್ರತ್ ಪೈಗಂಬರ್(ಸ) ಅವರು ಅಹ್‌ಝಾಬ್ ವಿರುದ್ಧ ಶಪಿಸಿದರು ಎಂದು ಸಹ ಉಲ್ಲೇಖಿಸಲಾಗಿದೆ. ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಸೋಮವಾರ, ಮಂಗಳವಾರ ಮತ್ತು ಬುಧವಾರದಂದು ಝುಹರ್ ಮತ್ತು ಅಸರಿನ ನಡುವಿನ ಸಮಯದಲ್ಲಿ ಬಂದು ತನ್ನ ತೋಳಿನ ಮೇಲೆ ಇದ್ದ ಚಾದರವನ್ನು ನೆಲದಲ್ಲಿ ಇರಿಸಿಕೊಂಡು ಕೈಯೆತ್ತಿ ಶತ್ರು ಸಂಘಗಳ ವಿರುದ್ಧವಾಗಿ ಶಾಪ ಪ್ರಾರ್ಥನೆ ಮಾಡಿದರು. ಜಾಬಿರ್(ರ) ಹೇಳುತ್ತಾರೆ: ನಾವು ಹಝ್ರತ್ ಪೈಗಂಬರ್(ಸ)ರ ಮುಖದಲ್ಲಿ ಸಂತೋಷವನ್ನು ಕಂಡೆವು. ಅಬ್ದುಲ್ಲಾ ಬಿನ್ ಔಫಾ(ರ) ಹೇಳಿದರು ಹಝ್ರತ್ ಪೈಗಂಬರ್(ಸ)ರು ಅಹ್‌ಝಾಬ್‌ನ ಮೇಲೆ ಶಾಪ ಪ್ರಾರ್ಥನೆ ಮಾಡಿದರು. ಅಬುನಈಮ್ ಇನ್ನಷ್ಟು ಸೇರಿಸಿದ್ದಾರೆ. ಇದು ಹೆಚ್ಚುವರಿ ಅಂಶವನ್ನು ಹೇಳಲಾಗಿದೆ: ಹಝ್ರತ್ ಪೈಗಂಬರ್(ಸ)ರು ಸೂರ್ಯ ಮುಳುಗಿದ ನಂತರ ಅವರು ಜನರ ನಡುವೆ ನಿಂತು ಹೀಗೆ ಹೇಳಿದರು ಓ ಜನರೇ! ನೀವು ಶತ್ರುಗಳೊಡನೆ ಮುಖಾಮುಖಿಯಾಗಲು ಬಯಸದಿರು, ಅಲ್ಲಾಹನಿಂದ ಸುರಕ್ಷೆಯನ್ನು ಬೇಡು. ಆದರೆ ವಿರೋಧಿಗಳೊಡನೆ ಮುಖಾಮುಖಿಯಾಗಿ ಬಿಟ್ಟರೆ ಸಹನೆದೋರು ಮತ್ತು ಸ್ವರ್ಗ ಖಡ್ಗಗಳ ನೆರಳಿನಡಿಯಲ್ಲಿ ಇದೆ ಎಂದು ತಿಳಿಯಿರಿ.

ಮತ್ತೆ ಹೇಳಿದರು: **ಅಲ್ಲಾಹುಮ್ಮ ಮುನ್‌ಝಿಲಲ್ ಕಿತಾಬಿ ಸರೀಉಲ್ ಹಿಸಾಬಿ ಇಹ್‌ಝಿಮಿಲ್ ಅಹ್‌ಝಾಬ, ಅಲ್ಲಾಹುಮ್ಮಹ್‌ಝಿಮ್‌ಹುಮ್ ವನ್‌ಸುರ್‌ನಾ ಅಲೈಹಿಮ್**- ಹೇ ಅಲ್ಲಾಹ್, ಗ್ರಂಥವನ್ನು ಅವತೀರ್ಣಗೊಳಿಸಿದವನೇ, ವೇಗವಾಗಿ ಲೆಕ್ಕ ತೆಗೆಯುವವನೇ, ನೀನು ಬೇಗನೇ ಶತ್ರು ಸೇನೆಯನ್ನು ಸೋಲಿಸು. ಹೇ ಅಲ್ಲಾಹ್, ನೀನು ಅವರನ್ನು ಪರಾಜಿತಗೊಳಿಸು ಮತ್ತು ಅವರ ವಿರುದ್ಧವಾಗಿ ನಮಗೆ ನೆರವು ನೀಡು.

ಒಂದು ಹದೀಸ್‌ನಲ್ಲಿ ಈ ಪ್ರಾರ್ಥನೆಯನ್ನು ಸಹ ಉಲ್ಲೇಖಿಸಲಾಗಿದೆ: **ಅಲ್ಲಾಹುಮ್ಮ ಇನ್ನೀ ಅನ್‌ಶುದುಕ ವವಅ್‌ದಕ,**

**ಅಲ್ಲಾಹುಮ್ಮ ಇನ್ ತಶಾ ಲಾ ತುಅ್‌ಬದ್–** ಹೇ ಅಲ್ಲಾಹ್, ನೀನು ನಮ್ಮೊಂದಿಗೆ ಮಾಡಿರುವ ಒಪ್ಪಂದ ಮತ್ತು ವಾಗ್ದಾನಗಳನ್ನು ಮುಂದಿರಿಸಿಕೊಂಡು ನಾನು ಹೇಳುತ್ತೇನೆ, ನೀನು ಇಷ್ಟಪಡುವುದಾದರೆ ನಿನ್ನ ಆರಾಧನೆ ನಡೆಯದಂತೆ ಮಾಡಬಹುದಾಗಿದೆ.

ಅಬೂ ಸಈದ್ ಖುದ್‌ರೀ(ರ) ವರದಿ ಮಾಡುತ್ತಾರೆ: ನಾವು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದೆವು: ಯಾ ರಸೂಲಲ್ಲಾಹ್, ಯಕೃತ್ತು ಗಂಟಲಿಗೆ ಬಂದು ಬಿಟ್ಟಿದೆ. ನಮಗೆ ಹೇಳಲು ಏನಾದರೂ ಪ್ರಾರ್ಥನೆಯಿದೆಯೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಇದೆ, ಹೀಗೆ ದುಆ ಮಾಡು: **ಅಲ್ಲಾಹುಮ್ಮಸ್‌ತುರ್ ಔರಾತಿನಾ ವಆಮನ್ ರೌಆತಿನಾ–** ಹೇ ಅಲ್ಲಾಹ್, ನಮ್ಮ ನ್ಯೂನತೆಗಳನ್ನು ಮರೆಮಾಚು ಮತ್ತು ನಮ್ಮ ಭಯವನ್ನು ದೂರೀಕರಿಸು.

ಹಝ್ರತ್ ಮುಸ್ಲೆಹ್ ಮೌಊದ್(ರ) ಸಹ ಹೀಗೆ ಹೇಳಿದ್ದಾರೆ: "ಕೆಲವು ಮುಸ್ಲಿಮರು ಭಯಭೀತರಾಗಿ ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬಂದು ಹೇಳಿದರು: ಯಾ ರಸೂಲಲ್ಲಾಹ್(ಸ)!! ಪರಿಸ್ಥಿತಿ ತುಂಬಾ ಅಪಾಯಕಾರಿಯಾಗಿ ಪರಿಣಮಿಸಿದೆ. ಈಗ ಮದೀನಾ ಪಾರಾಗುವ ಭರವಸೆಯೇ ಇಲ್ಲದಂತಾಗಿದೆ. ನೀವು ಈ ಸಮಯದಲ್ಲಿ, ಸರ್ವಶಕ್ತನಾದ ಅಲ್ಲಾಹನಲ್ಲಿ ದುಆ ಮಾಡಿರಿ ಮತ್ತು ನಮಗೂ ಕೂಡ ದುಆವನ್ನು ಕಲಿಸಿರಿ, ಅದನ್ನು ಪಠಿಸುವ ಮೂಲಕ ಅಲ್ಲಾಹನ ಅನುಗ್ರಹವು ನಮಗೆ ಬಹಿರಂಗಗೊಳ್ಳುತ್ತದೆ. ಅದಕ್ಕೆ ಅವರು(ಸ) ಹೇಳಿದರು, "ನೀವು ಭಯಭೀತರಾಗಬೇಡಿ. ನಿಮ್ಮ ದೌರ್ಬಲ್ಯಗಳನ್ನು ಮುಚ್ಚಲು ಮತ್ತು ನಿಮ್ಮ ಹೃದಯಗಳನ್ನು ಬಲಪಡಿಸಲು ಮತ್ತು ನಿಮ್ಮ ಭಯವನ್ನು ಹೋಗಲಾಡಿಸಲು ನೀವು ಸರ್ವಶಕ್ತನಾದ ಅಲ್ಲಾಹನನ್ನು ಪ್ರಾರ್ಥಿಸುತ್ತೀರಿ ಮತ್ತು ನಂತರ ನೀವು ಸ್ವತಃ ಹೀಗೆ ಪ್ರಾರ್ಥಿಸಿದರು:

**ಅಲ್ಲಾಹುಮ್ಮ ಮಿನ್‌ಝಿಲಲ್ ಕಿತಾಬಿ ಸರೀಇಲ್ ಹಿಸಾಬಿ ಇಹ್‌ಝಿಮಿಲ್ ಅಹ್‌ಝಾಬ ಅಲ್ಲಾಹುಮ್ಮಹ್‌ಝಿಮ್‌ಹುಮ್ ವ ಝಲ್‌ಝಿಲ್‌ಹುಮ್–**

ಅದೇ ರೀತಿ ಹೀಗೆ ದುಆ ಮಾಡಿದರು.

**ಯಾ ಸರೀಖಲ್ ಮುಕ್ರೂಬೀನ ಯಾ ಮುಜೀಬಲ್ ಮುಝ್‌ತರ್ರೀನಕ್‌ಶಿಫ್ ಹಮ್ಮೀ ವ ಗ಼ಮ್ಮಿ ವ ಕರ್‌ಬೀ ಫಇನ್ನಕ ತರಾ ಮಾ ನಝುಲ ಬೀ ವಬಿಅಸ್‌ಹಾಬೀ–**

ಅಂದರೆ: ಹೇ ಅಲ್ಲಾಹ್, ಗ್ರಂಥವನ್ನು ಅವತೀರ್ಣಗೊಳಿಸಿದವನೇ, ವೇಗವಾಗಿ ಲೆಕ್ಕ ತೆಗೆಯುವವನೇ, ನೀನು ಬೇಗನೇ ಶತ್ರು ಸೇನೆಯನ್ನು ಸೋಲಿಸು. ಹೇ ಅಲ್ಲಾಹ್, ನೀನು ಅವರನ್ನು ಪರಾಜಿತಗೊಳಿಸು ಮತ್ತು ಅವರ ವಿರುದ್ಧವಾಗಿ ನಮಗೆ ನೆರವು ನೀಡು. ಅವರ ಉದ್ದೇಶಗಳನ್ನು ಅಲುಗಾಡಿಸಬೇಕೆಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಓ ನೊಂದವರ ಪ್ರಾರ್ಥನೆಯನ್ನು ಕೇಳುವವನೇ! ಗಾಬರಿಯಿಂದ ಜನರ ಕರೆಗೆ ಓಗೊಡುವವನೇ!"

ಈ ಪ್ರಾರ್ಥನೆಯ ಅನುವಾದವೇನೆಂದರೆ, ನೊಂದವರ ಪ್ರಾರ್ಥನೆಯನ್ನು ಕೇಳುವವನೇ! ಭಯಭೀತರಾದ ಜನರ ಕರೆಗೆ ಉತ್ತರ ನೀಡುವವನೇ! "ನನ್ನ ದುಃಖ ಮತ್ತು ನನ್ನ ಆತಂಕ ಮತ್ತು ನನ್ನ ಗಾಬರಿತನವನ್ನು ತೆಗೆದುಹಾಕು, ಏಕೆಂದರೆ ನಾನು ಮತ್ತು ನನ್ನ ಸಹಚರರು ಎದುರಿಸುತ್ತಿರುವ ನೋವುಗಳು ನಿನಗೆ ತಿಳಿದಿದೆ."

(ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–275)

ಯುದ್ಧವು ಇದೇ ರೀತಿಯಲ್ಲಿ ತನ್ನ ಔನತ್ಯಕ್ಕೆ ತಲುಪಿತ್ತು. ಅತ್ತ ಮಕ್ಕಾದ ಖುರೈಶಿಗಳು ಮತ್ತು ಅವರ ಮಿತ್ರ ಪಕ್ಷಗಳು ಈಗ ಸತತವಾದ ಮುತ್ತಿಗೆಯಿಂದ ಬೇಸತ್ತು ಹೋಗಿದ್ದರು. ಆದಷ್ಟು ಬೇಗ ಯಾವುದಾದರೂ ನಿರ್ಣಾಯಕ ದಾಳಿ ನಡೆಸಿ ಮುಸ್ಲಿಮರನ್ನು ಕೊನೆಗೊಳಿಸಲು ಅವರು ಬಯಸುತ್ತಿದ್ದರು. ಏಕೆಂದರೆ ಯುದ್ಧದ ದೃಷ್ಟಿಕೋನದಲ್ಲಿ, ಮುಸ್ಲಿಮರು ಎಲ್ಲಾ ಕಡೆಯಿಂದ ಸುತ್ತುವರೆದಿದ್ದರು ಮತ್ತು ಬನೂ ಖುರೈಝಾ ಅವರಂತಹ ಅವರ ಮಿತ್ರರು ಮದೀನಾದ ಒಳಗಿದ್ದರು, ಈ ಎಲ್ಲಾ ಅಂಶಗಳು ಸತ್ಯನಿಷೇಧಿಗಳ ಭರವಸೆ ಮತ್ತು ನೈತಿಕತೆಯನ್ನು ವರ್ಧಿಸಲು ಸಾಕಾಗಿದ್ದವು ಮತ್ತು ಈಗ ಅವರು ನಮ್ಮೆಲ್ಲರನ್ನು ಒಂದೇ ಬಾರಿಗೆ ಹಲ್ಲಾ ಮಡಿ ಮದೀನಾವನ್ನು ಧ್ವಂಸಗೊಳಿಸಲು ಯೋಜನೆಗಳನ್ನು ಹೂಡುತ್ತಿದ್ದರು. ಸತ್ಯನಿಷೇಧಿಗಳ ಮುಖಂಡರು ಆ ಯೋಜನೆಗಳನ್ನು ಹಣೆಯುತ್ತಿದ್ದರು. ಆದರೆ ಮತ್ತೊಂದೆಡೆ ಅಲ್ಲಾಹನು ಅವರ ಉದ್ದೇಶಗಳನ್ನು ಮಣ್ಣು ಪಾಲು ಮಾಡಲು ತೀರ್ಮಾನಿಸಿದ್ದನು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಗ಼ತ್‌ಫಾನ್ ಗೋತ್ರಗಳ ಶಾಖೆಯಾದ ಅಶ್‌ಜಅ್‌ಗೆ ಸಂಬಂಧಪಟ್ಟ ಓರ್ವ ವ್ಯಕ್ತಿ ನುಐಮ್ ಬಿನ್ ಮಸ್‌ಊದ್ ಈ ಯುದ್ಧದಲ್ಲಿ ಮುಸ್ಲಿಮರ ವಿರುದ್ಧದ ಹೋರಾಟದಲ್ಲಿ ಇದ್ದನು. ಆದರೆ ಆ ವ್ಯಕ್ತಿ ಮನಸ್ಸಿನಲ್ಲಿ ಮುಸ್ಲಿಮನಾಗಿದ್ದನು. ಆತನು ಇಸ್ಲಾಂ ಧರ್ಮ ಸ್ವೀಕರಿಸಿದ್ದು ಸತ್ಯನಿಷೇಧಿಗಳಿಗೆ ಗೊತ್ತಿರಲಿಲ್ಲ. ಹೀಗೆ ಆತನು ಅದರ ಪ್ರಯೋಜನ ಪಡೆಯುತ್ತಾ ಒಂದು ದಿನ ಮದೀನಕ್ಕೆ ತಲುಪಿದನು ಮತ್ತು ಮೊತ್ತಮೊದಲಾಗಿ ಬನೂ ಖುರೈಝ಼ ಗೋತ್ರದ ಬಳಿಗೆ ಹೋದನು. ನುಐಮ್‌ಗೆ ಬನೂ ಖುರೈಝ಼ದ ಮುಖಂಡರೊಂದಿಗೆ ಹಳೆಯ ಗೆಳತನವಿದ್ದ ಕಾರಣದಿಂದ ಆತನು ಬನೂ ಖುರೈಝ಼ದ ಮುಖಂಡರೊಡನೆ ಹೀಗೆ ಹೇಳಿದನು: ನೀವು ಮುಹಮ್ಮದ್(ಸ)ರನ್ನು ಮೋಸ ಮಾಡಿ ಗ಼ತ್‌ಫಾನ್ ಮತ್ತು ಖುರೈಶಿಯರೊಂದಿಗೆ ಸೇರಿದ್ದು ಸರಿಯಲ್ಲ ಎಂಬುದು ನನ್ನ ಅನಿಸಿಕೆ. ಅವರು ಇಲ್ಲಿ ಕೆಲವು ದಿನಗಳ ಅತಿಥಿಗಳು ಮಾತ್ರವಾಗಿದ್ದಾರೆ. ನೀವಂತೂ ಇಲ್ಲೇ ಇರಬೇಕಾಗಿದೆ. ನೆನಪಿಡಿರಿ, ಖುರೈಶ್ ಮತ್ತು ಗ಼ತ್‌ಫಾನ್ ಗೋತ್ರ ಮರಳಿ ಹೋಗುವಾಗ ನಿಮ್ಮನ್ನು ಮುಸ್ಲಿಮರ ಬಳಿಯಲ್ಲೇ ಬಿಟ್ಟು ಹೋಗುವರು. ಆದ್ದರಿಂದ ಕನಿಷ್ಠ ಪಕ್ಷ ನೀವು ಹೀಗೆ ಮಾಡಿರಿ. ನಿಮ್ಮೊಂದಿಗೆ ಯಾವುದೇ ಮೋಸ ನಡೆಯದು ಎಂಬುದನ್ನು ಖಾತರಿಪಡಿಸಲು ಖುರೈಶಿ ಮತ್ತು ಗ಼ತ್‌ಫಾನ್ ಗೋತ್ರದ ಕೆಲವು ಜನರನ್ನು ಒತ್ತೆಯಾಳಾಗಿ ನಿಮ್ಮ ಜೊತೆಗೆ ಇರಿಸಿರಿ. ಬನೂ ಖುರೈಝಾದ ಮುಖ್ಯಸ್ಥರು ನುಐಮ್‌ನ ಮಾತುಗಳನ್ನು ಅರ್ಥಮಾಡಿಕೊಂಡರು ಮತ್ತು ನಂತರ ಯಾವುದೇ ತೊಂದರೆಯನ್ನು ಎದುರಿಸಬಾರದೆಂದು ಖುರೈಷಿಗಳಿಂದ ಒತ್ತೆಯಾಳುಗಳನ್ನು ಕೇಳಲು ಒಪ್ಪಿಕೊಂಡರು. ಅನಂತರ ನುಐಮ್ ಬಿನ್ ಮಸ್‌ಊದ್ ಖುರೈಶಿಯರ ಬಳಿಗೆ ಹೋಗಿ ಅವರೊಡನೆ ಹೀಗೆ ಹೇಳಿದನು: ಬನೂ ಖುರೈಝ಼ದ ಜನರು ನಿಮ್ಮ ಕುರಿತು ಭಯಪಡುತ್ತಿದ್ದಾರೆ. ನಿಮ್ಮ ಕೆಲವು ವ್ಯಕ್ತಿಗಳನ್ನು ಅವರ ಬಳಿ ಜಾಮೀನಾಗಿ ಇರಿಸಿಕೊಳ್ಳಲು ಅವರು ಬಯಸುತ್ತಿದ್ದಾರೆ. ಆದರೆ ನೀವು ಖಂಡಿತವಾಗಿಯೂ ಅದಕ್ಕೆ ಒಪ್ಪಬೇಡಿರಿ. ಅದೇ ರೀತಿಯಲ್ಲಿ ಆತನು ಬನೂ ಗ಼ತ್‌ಫಾನ್ ಗೋತ್ರದೊಂದಿಗೂ ಇಂತಹದ್ದೇ ಮಾತುಗಳನ್ನು ಹೇಳಿದನು. ಮುಸ್ಲಿಮರ ಸಂಖ್ಯೆ ಕಡಿಮೆಯಿರುವುದರಿಂದ ಅವರಿಗೆ ಎದುರಿಸಲು ಸಾಧ್ಯವಾಗದಂತೆ ಮಾಡಲು ಮತ್ತು ಹೇಗಾದರೂ ಅವರ ಪಂಕ್ತಿ ಮುರಿದು ಹೋಗುವಂತಾಗಲು ಹಾಗೂ ದಾಳಿ ಮಾಡುವವರು ಸುಲಭವಾಗಿ ಮದೀನಕ್ಕೆ ಪ್ರವೇಶಿಸುವಂತಾಗಲು ಮುಸ್ಲಿಮರ ಮೇಲೆ ನಾಲ್ಕೂ ಕಡೆಯಿಂದಲೂ ಒಂದೇ ಸಮಯದಲ್ಲಿ ದಾಳಿ ನಡೆಸಲು ಆ ದಿನಗಳಲ್ಲಿ ಖುರೈಶ್ ಮತ್ತು ಗ಼ತ್‌ಫಾನ್ ಯೋಜನೆ ಹಾಕಿದ್ದರು. ಈ ಉದ್ದೇಶದಿಂದ ಅವರು ಬನೂ ಖುರೈಝಾ ಅವರಿಗೆ ಹೀಗೆ ಸಂದೇಶವನ್ನು ಕಳುಹಿಸಿದರು: "ಮುತ್ತಿಗೆಯು ದೀರ್ಘವಾಗುತ್ತಿದೆ ಮತ್ತು ಜನರು ಸುಸ್ತಾಗುತ್ತಿದ್ದಾರೆ ಹಾಗಾಗಿ ಎಲ್ಲ ಗೋತ್ರದವರು ಸೇರಿ ನಾಳೆ ಮುಸ್ಲಿಮರ ಮೇಲೆ ಒಗ್ಗಟ್ಟಾಗಿ ದಾಳಿ ನಡೆಸಬೇಕು ಎಂದು ಸೂಚಿಸಿದ್ದೇವೆ. ಆದ್ದರಿಂದ ನಾಳೆಯ ದಾಳಿಗೆ ಸಿದ್ಧರಾಗಿ. ನುಐಮ್ ಬಿನ್ ಮಸ್‌ಊದ್ ಈಗಾಗಲೇ ಬನೂ ಖುರೈಝಾ ಅವರೊಂದಿಗೆ ಮಾತನಾಡಿದ್ದ ಅವರು ಹೀಗೆ ಉತ್ತರಿಸಿದರು: ನಾಳೆ ನಮಗೆ ಸಬ್ಬತ್ ದಿನವಾಗಿದೆ. ಆದ್ದರಿಂದ ನಮಗೆ ಬರಲು ಸಾಧ್ಯವಲ್ಲ. ಅದಲ್ಲದೇ ಎಲ್ಲಿಯ ತನಕ ನೀವು ನಿಮ್ಮ ಕೆಲವು ಜನರನ್ನು ನಮ್ಮ ಬಳಿ ಇರಿಸಿಕೊಳ್ಳುವುದಿಲ್ಲವೋ ಅಲ್ಲಿಯ ತನಕ ನಾವು ಈ ದಾಳಿಯಲ್ಲಿ ಪಾಲ್ಗೊಳ್ಳಲಾರೆವು ಎಂದು ಹೇಳಿದರು. ಬನೂ ಖುರೈಝಾ ಅವರ ಈ ಉತ್ತರವನ್ನು ಕೇಳಿದ ಖುರೈಶ್ ಮತ್ತು ಘತ್‌ಫಾನ್ ಅವರು ಆಶ್ಚರ್ಯಚಕಿತರಾದರು ಮತ್ತು ಬನೂ ಖುರೈಝಾ ಅವರು ನಮ್ಮ ದ್ರೋಹಕ್ಕೆ ಬಗ್ಗಿದ್ದಾರೆ ಎಂಬ ಸತ್ಯವನ್ನು ನುಐಮ್ ಹೇಳಿದ್ದಾರೆ ಎಂದು ಹೇಳಿದರು. ಇನ್ನೊಂದೆಡೆ, ನಾವು ಒತ್ತೆಯಾಳುಗಳನ್ನು ನೀಡುವುದಿಲ್ಲ ಎಂಬ ಖುರೈಶ್ ಮತ್ತು ಘತ್‌ಫಾನ್‌ರ ಉತ್ತರವನ್ನು ಬನೂ ಖುರೈಝಾ ಪಡೆದಾಗ. ಖುರೈಶ್ ಮತ್ತು ಘತ್‌ಫಾನ್‌ರ ಉದ್ದೇಶಗಳು ಒಳ್ಳೆಯದಲ್ಲ ಎಂದು ನುಐಮ್ ನಮಗೆ ಒಳ್ಳೆಯ ಸಲಹೆಯನ್ನು ನೀಡಿದ್ದಾನೆ ಎಂದು ಬನೂ ಖುರೈಝಾ ಹೇಳಿದರು, ಮತ್ತು ಹಾಗೆ ನುಐಮನ ಯೋಜನೆ ಸಫಲವಾಯಿತು. ಉಭಯ ಪಕ್ಷಗಳಲ್ಲೂ ಅಸಮಾಧಾನದ ಸ್ಥಿತಿಯುಂಟಾಯಿತು. ಬನೂ ಗ಼ತ್‌ಫಾನ್ ಮತ್ತು ಖುರೈಶಿಯರು ಹೀಗೆ ಸಂದೇಶ ಕಳುಹಿಸಿದರು: "ನಾವು ಒತ್ತೆಯಾಳುಗಳನ್ನು ಕೊಡುವುದಿಲ್ಲ. ನೀವು ಬರುವುದಾದರೆ ಹಾಗೆಯೇ ಬನ್ನಿರಿ." ಗ಼ತ್‌ಫಾನ್ ಮತ್ತು ಖುರೈಶಿಯರ ಉದ್ದೇಶ ಸರಿಯಿಲ್ಲ ಎಂದು ಬನೂ ಖುರೈಝ಼ ಗೋತ್ರಕ್ಕೆ ಖಚಿತವಾಯಿತು. ಹೀಗೆ ನುಐಮಿನ ತಂತ್ರ ಯಶಸ್ವಿಯಾಯಿತು.

(ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–591–593)

**(ಮುಂದುವರಿಯುವುದು)**

'ಬದರ್' ವಾರಪತ್ರಿಕೆಯನ್ನು Online ಮುಖಾಂತರ
ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:
https://akhbarbadr.in/Kannada/#gsc.tab=0

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಕಚ್ಚೇರಿಗಳಲ್ಲಿ ಸೇವೆಸಲ್ಲಿಸಲು ಬಯಸುವವರು ಗಮನಹರಿಸಿರಿ

**ಎರಡನೇ ದರ್ಜೆಯ ಪೋಸ್ಟ್‌ಗಾಗಿ ಷರತ್ತುಗಳು**

(1) ಅಭ್ಯರ್ಥಿಯ ವಯಸ್ಸು 25 ವರ್ಷಗಳಿಗಿಂತ ಹೆಚ್ಚು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯು 45% ಅಂಕಗಳೊಂದಿಗೆ ಕನಿಷ್ಠ 10+2 ರ ಶೈಕ್ಷಣಿಕ ಅರ್ಹತೆಯುನ್ನು ಹೊಂದಿರಬೇಕು (3) ಅಭ್ಯರ್ಥಿಯು ಉರ್ದು/ಇಂಗ್ಲಿಷ್ ಕಮ್ಪೋಝಿಂಗ್ ತಿಳಿದಿರಬೇಕು ಮತ್ತು ವೇಗದ ಮಿತಿ ಪ್ರತಿ ನಿಮಿಷಕ್ಕೆ 25 ಪದಗಳಾಗಿರಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

ಎರಡನೇ ದರ್ಜೆಯವರಿಗೆ ಪರಿಕ್ಷೆ ಕೆಳಕಂಡಂತೆ ಪತ್ರಕ್ರಮದಂತೆ ಇರುತ್ತದೆ. ಪರಿಕ್ಷೆಯ ಪ್ರತಿ ಭಾಗದಲ್ಲೂ ಉತ್ತೀರ್ಣ ಆಗುವುದು ಕಡ್ಡಾಯವಾಗಿರುತ್ತದೆ.

**ಭಾಗ–1:** * ಪವಿತ್ರ ಖುರ್‌ಆನ್ ನಾಝಿರ ಪೂರ್ಣ, ಅನುವಾದದೊಂದಿಗೆ ಮೊದಲ ಭಾಗ * ಚಾಲೀಸ್ ಜವಾಹಿರ್ ಪಾರೆ. ಅರ್ಕಾನೆ ಇಸ್ಲಾಮ್, ಸಂಪೂರ್ಣ ನಮಾಝ್ ಅನುವಾದದೊಂದಿಗೆ. **(30 ಸಂಖ್ಯೆಗಳು)**

**ಭಾಗ–2:** ಕೆಶ್ತಿ ನೂಹ್, ಬರಕಾತುದ್ದುಆ, ದೀನೀ ಮಾಲೂಮಾತ್ * ಪ್ರಬಂಧ ಅಹ್ಮದೀಯ ಜಮಾತ್‌ನ ನಂಬಿಕೆಗಳು * ನಝುಮ್ ದುರ್ರೆ ಸಮೀನ್ (ಶಾನ್ ಇಸ್ಲಾಂ). **(20 ಅಂಕಗಳು)**

**ಭಾಗ–3:** ಇಂಗ್ಲಿಷ್ ಪದವಿ ಪೂರ್ವ ಶಿಕ್ಷಣದ (10+2) ಮಾನದಂಡದ ಪ್ರಕಾರ. **(20 ಅಂಕಗಳು)**

**ಭಾಗ–4:** ಮೆಟ್ರಿಕ್ ಮಾನದಂಡದ ಪ್ರಕಾರ ಅಂಕಗಣಿತ (ಆಫೀಸ್ ಇಂಪ್ರೆಸ್ಟ್‌ಗೆ ಸಂಬಂಧಿಸಿದ ಪ್ರಶ್ನೆಗಳು). **(20 ಅಂಕಗಳು)**

**ಭಾಗ–5:** ಸಾಮಾನ್ಯಜ್ಞಾನ (ಜಿ.ಕೆ) **(10 ಅಂಕಗಳು)**

(6) ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮತ್ರ ಸಂದರ್ಶಿಸಲಾಗುವುದು (7) ಲಿಖಿತ ಪರೀಕ್ಷೆ, ಕಂಪ್ಯೂಟರ್ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಯಶಸ್ಸಿನ ಸಂದರ್ಭದಲ್ಲಿ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆ ಸಮಿತಿಯ ವರದಿಯ ಪ್ರಕಾರ ಯಾರು ಆರೋಗ್ರವಂತಿರುತ್ತಾರೊ ಆ ಅಭ್ಯರ್ಥಿಗಳು ಮಾತ್ರ ಸೇವೆಸಲ್ಲಿಸಲು ಅರ್ಹರಾಗಿರುತ್ತಾರೆ. (8) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖಾದಿಯಾನ್‌ನಲ್ಲಿ ತನ್ನ ಸ್ವಂತ ವಸತಿಯುನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ, ವಸತಿಗೆ ಸಂಬಂಧಿಸಿದಂತೆ ನಂತರ ಸ್ವೀಕರಿಸಿದ ಅರ್ಜಿಯು ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ. (9) ಖದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.

**(ಗಮನಿಸಿ: ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)**

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

ನಝಾರತ್ ದೀವಾನ್ ಸ್ರ ಅಂಜುಮನ್ ಅಹ್ಮದಿಯಾ
ಖಾದಿಯಾನ್–143516, ಮೊಬೈಲ್: 09682627592,
09682587713,
ಕಛೇರಿ: 01872–501130, ಇ–ಮೇಲ್: diwan@qadian.in

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ R ° Ã¥ $À **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

**MUSLIM TELEVISION AHMADIYYA INTERNATIONAL**
**www.mta.tv**

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಡ್ರೈವರ್ ಹುದ್ದೆಗೆ ಘೋಷಣೆ

### ಷರತ್ತುಗಳು

(1) ಅಭ್ಯರ್ಥಿಯ ವಯಸ್ಸು 18 ವರ್ಷಕ್ಕಿಂತ ಹೆಚ್ಚು ಮತ್ತು 40 ವರ್ಷಕ್ಕಿಂತ ಕಡಿಮೆ ಇರಬೇಕು. (2) ಅಭ್ಯರ್ಥಿಯು ಕನಿಷ್ಠ 10ನೇ ತರಗತಿ ತೇರ್ಗಡೆ ಹೊಂದಿರಬೇಕು. (3) ಅಭ್ಯರ್ಥಿಯು ಮಾನ್ಯವಾದ ನಾಲ್ಕು ಚಕ್ರದ ಚಾಲನಾ ಪರವಾನಗಿಯುನ್ನು ಹೊಂದಿರಬೇಕು. (4) ಅಭ್ಯರ್ಥಿಯು ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಕನಿಷ್ಠ 2 ವರ್ಷಗಳ ಚಾಲನಾ ಅನುಭವವನ್ನು ಹೊಂದಿರುವುದು ಅವಶ್ಯಕ. ಅದೇ ರೀತಿ ಅಭ್ಯರ್ಥಿಯು ತನ್ನ ಅರ್ಜಿಯೊಂದಿಗೆ ಅಭ್ಯರ್ಥಿಯು ಅನುಭವವನ್ನು ಪಡೆದಿರುವ ಸಂಸ್ಥೆಯ ಅನುಭವ ಪ್ರಮಾಣಪತ್ರವನ್ನು (Experience Certificate) ಸಲ್ಲಿಸುವುದು ಸಹ ಕಡ್ಡಾಯವಾಗಿದೆ. (5) ಅಭ್ಯರ್ಥಿಯು ತನ್ನ ಜನ್ಮ ಪ್ರಮಾಣಪತ್ರವನ್ನು (Birth Certificate) ಸಲ್ಲಿಸುವುದು ಅವಶ್ಯಕ. (6) ಅಭ್ಯರ್ಥಿಯು ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣ ಆಗಬೇಕು. (7) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಚಾಲನಾ ಪರೀಕ್ಷೆಯನ್ನು (Driving Test) ಸಹ ನೀಡಲಾಗುತ್ತದೆ. (8) ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾಜುಥಿಂನ್‌ನಿಂದ ವೈದ್ಯಕೀಯ ಫಿಟ್‌ನೆಸ್ ಪ್ರಮಾಣಪತ್ರದ ಪ್ರಕಾರ ಫಿಟ್ ಮತ್ತು ಆರೋಗ್ಯವಂತರಾಗಿರಬೇಕು. (9) ನೇಮಕಾತಿಯ ನಂತರ ಅಭ್ಯರ್ಥಿ ಚಾಲಕನಿಗೆ ಗ್ರೇಡ್–2 ಗೆ ಸಮಾನವಾದ ಭತ್ಯೆ ಮತ್ತು ಇತರ ಸೌಲಭ್ಯಗಳನ್ನು ನೀಡಲಾಗುವುದು. (10) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಗಳು ಮೊದಲ ಐದು ವರ್ಷಗಳ ಕಾಲ ಖಾದಿಯಾನ್‌ನಲ್ಲಿ ತಮ್ಮ ಸ್ವಂತ ವಸತಿಯ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. (11) ಖಾದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.

**ಗಮನಿಸಿ: ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ, ಸಂದರ್ಶನ ಮತ್ತು ಡ್ರೈವಿಂಗ್ ಪರೀಕ್ಷೆಯ ದಿನಾಂಕವನ್ನು ನಂತರ ತಿಳಿಸಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ
ಖಾದಿಯಾನ್–143516
ಮೊಬೈಲ್: 09888232530, 09682627592,
ಕಛೇರಿ: 01872–501130
ಇ–ಮೇಲ್: diwan@qadian.in

### ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

**(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

**"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 31 October, 07 November 2024, Issue No. 44-45

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ–43ರ ಉಳಿದ ಭಾಗ ಮುಂದುವರಿಸಲಾಗಿದೆ)*

ಭಾಷಣದ ನಂತರ ಹುಝೂರ್ ಅನ್ವರ್(ಅತಬಅ) ದುಆ ಮಾಡಿಸಿದರು.

ಆನಂತರ ಒಂಭತ್ತು ಗಂಟೆ ಇಪ್ಪತ್ತು ನಿಮಿಷಕ್ಕೆ ಹುಝೂರ್ ಅನ್ವರ್(ಅತಬಅ) ಮಗರಿಬ್ ಮತ್ತು ಇಶಾ ನಮಾಝ್ ಅನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು.

ನಮಾಝ್ ಆದನಂತರ ತನ್ನ ವಸತಿಯತ್ತ ಹೋಗುವಾಗ ಹುಝೂರ್ ಅನ್ವರ್(ಅತಬಅ) ಒಂದೇ ಸ್ಥಳದಲ್ಲಿ ನಿಂತು ಮೇಲಂತಸ್ತಿನಿಂದ HUMANITY FIRST EXHIBITION ಅನ್ನು ವೀಕ್ಷಿಸಿದರು. ಹುಝೂರ್ ಅನ್ವರ್(ಅತಬಅ) ಅಮೀರ್ ಸಾಹೇಬ್ ಜರ್ಮನಿ ಅವರನ್ನು HUMANITY FIRST ಕಾರ್ಯಗಳಲ್ಲಿ ಸಹಾಯ ನೀಡಲು ನಿರ್ದೇಶಿಸಿದರು. ಹುಝೂರ್ ಅನ್ವರ್(ಅತಬಅ) ಹೇಳಿದರು, HUMANITY FIRST ಖಲೀಫತುಲ್ ಮಸೀಹ್ ಅವರ ನಿರ್ದೇಶನದ ಮೇರೆಗೆ ಸ್ಥಾಪಿತಗೊಂಡ ಸಂಘಟನೆಯಾಗಿದೆ. ಮತ್ತು ಖಲೀಫರ ಆಶಯ ಹಾಗೂ ನಿರ್ದೇಶನದ ಮೇರೆಗೆ ಇಲ್ಲಿ ಕೆಲಸ ಮಾಡುತ್ತಿದ್ದೀರಿ.

ಇನ್‌ಚಾರ್ಜ್ HUMANITY FIRST ಜರ್ಮನಿ ಅವರು ಹುಝೂರ್ ಅನ್ವರ್(ಅತಬಅ)ರ ಸೇವೆಯಲ್ಲಿ ಹೇಳಿದರು. ನಾವು ಮಾಡಿದ್ದೆಲ್ಲ Merchendise ಸ್ವಯಂ ತಯಾರಿಸಿದ್ದೇವೆ. ಸ್ವಯಂ ಮಶೀನ್ ಕೊಂಡುಕೊಂಡಿದ್ದೇವೆ. ಲೇಸರಿನ ಮಶೀನ್ ಸಹ ತೆಗೆದುಕೊಂಡಿದ್ದೇವೆ.

ಆಗ ಹುಝೂರ್ ಅನ್ವರ್(ಅತಬಅ) ಹೇಳಿದರು: ನೀವು ಅದ್ಭುತವಾದ ಕೆಲಸವನ್ನು ಮಾಡಿದ್ದೀರಿ. ಸ್ವಯಂ ತಯಾರಿಸಿದ್ದೀರಿ ಎಂದರೆ ಅದು ತುಂಬಾ ಒಳ್ಳೆಯ ಮಾತಾಗಿದೆ. ಹುಝೂರ್ ಅನ್ವರ್(ಅತಬಅ) ಇನ್‌ಚಾರ್ಜ್ ಸಾಹೆಬರಿಗೆ ನಿರ್ದೇಶನ ನೀಡಿದರು. WATER FOR LIFE ಅನ್ವಯ ಒಂದು ಕಲುಷಿತ ನೀರಿನ ಬಕೆಟ್ ತಮ್ಮ EXHIBITION ನಲ್ಲಿ ಇರಿಸಿರಿ. ಏಕೆಂದರೆ ಜನರಿಗೆ ತಿಳಿಯುವಂತಾಗಲಿ. ಆಫ್ರೀಕಾದ ಕೆಲವು ಕ್ಷೇತ್ರಗಳಲ್ಲಿ ಜನರು ಈ ರೀತಿಯ ಕಲುಷಿತ ನೀರನ್ನು ಕುಡಿಯುತ್ತಾರೆ. ಇದರಿಂದ ಮೊದಲನೆಯದಾಗಿ ಕೃತಜ್ಞತಾ ಭಾವ ಉಂಟಾಗುವುದು. ಎರಡನೆಯದಾಗಿ ಜನರಲ್ಲಿ ಸೇವಾಭಾವ ಉಂಟಾಗುವುದು.

ಅನಂತರ ಹುಝೂರ್ ಅನ್ವರ್(ಅತಬಅ) ವಸತಿ ನಿಲಯಕ್ಕೆ ತೆರಳಿದರು. ಜಲ್ಸಾ ಸಾಲಾನ ಜನಗಳಲ್ಲಿ ಹುಝೂರ್ ಅನ್ವರ್(ಅತಬಅ) ಜಲ್ಸಾ ಸ್ಥಳದ ಒಳಗೆ ತಮ್ಮ ವಸತಿ ಮಾಡಿದ್ದರು.

**ಒಂದನೇ ಸೆಪ್ಟೆಂಬರ್ ಶುಕ್ರವಾರ**

ಹುಝೂರ್ ಅನ್ವರ್(ಅತಬಅ) ಮುಂಜಾನೆ 5:40 ಗಂಟೆಗೆ ಪುರುಷರ ಜಲ್ಸ ಸ್ಥಳದಲ್ಲಿ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್(ಅತಬಅ) ತಮ್ಮ ವಸತಿಯತ್ತ ತೆರಳಿದರು. ಮುಂಜಾನೆ ಹುಝೂರ್ ಅನ್ವರ್(ಅತಬಅ) ಕಚೇರಿ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು.

ಇಂದು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಜರ್ಮನಿಯ 47ನೇ ವಾರ್ಷಿಕ ಸಮ್ಮೇಳನದ ಪ್ರಾರಂಭ ಆಗಬೇಕಾಗಿತ್ತು. ಈ ಸಮ್ಮೇಳನವು ಜರ್ಮನಿಯ ಒಂದು ಶತನಕ ಪೂರ್ಣಗೊಳಿಸುವ ಸಮ್ಮೇಳನವಾಗಿದ್ದರಿಂದ, ಅದೊಂದು ಐತಿಹಾಸಿಕ ಸಮ್ಮೇಳನವಾಗಿತ್ತು ಮತ್ತು ಅದಕ್ಕೆ ಇನ್ನಷ್ಟು ಪ್ರಾಮುಖ್ಯತೆ ದೊರಕಿತ್ತು.

**ಧ್ವಜಾರೋಹಣ ಮತ್ತು ಜುಮುಅ ಖುತ್‌ಬದೊಂದಿಗೆ ಜಲ್ಸ ಸಾಲಾನ ಜರ್ಮನಿಯ ಪ್ರಾರಂಭ:–**

ಕಾರ್ಯಕ್ರಮದನ್ವಯ ಮಧ್ಯಾಹ್ನ 1:55 ಗಂಟೆಗೆ ಹುಝೂರ್ ಅನ್ವರ್(ಅತಬಅ) ಧ್ವಜಾರೋಹನ ನೆರವೇರಿಸಲು ಜಲ್ಸ ಸ್ಥಳದ ವಿವಿಧ ಸಭಾಂಗಣಗಳ ನಡುವೆ ಇರುವ ಮುಕ್ತ ಮೈದಾನದಲ್ಲಿ ಆಗಮಿಸಿದರು.

ಹುಝೂರ್ ಅನ್ವರ್(ಅತಬಅ) ಅಹ್ಮದಿಅತ್‌ನ ಧ್ವಜ ಹಾರೈಸಿದರು. ಅಮೀರ್ ಸಾಹಿಬ್ ಜರ್ಮನಿ, ಜರ್ಮನಿಯ ರಾಷ್ಟ್ರೀಯ ಧ್ವಜ ಆರೋಹಣ ಮಾಡಿದರು, ತದನಂತರ ಹುಝೂರ್ ಅನ್ವರ್(ಅತಬಅ) ದುಆ ಮಾಡಿಸಿದರು.

MTA International ನ ಇಲ್ಲಿಯ ಸ್ಥಳದಿಂದ ನೇರ ಪ್ರಸಾರಗಳು ಮುಂಜಾನೆಯಿಂದಲೇ ಪ್ರಾರಂಭಿಸಲಾಗಿತ್ತು. ಧ್ವಜಾರೋಹನದ ಈ ಸಮಾರಂಭವನ್ನು ಸಹ ಲೋಕದಾದ್ಯಂತ ನೇರವಾಗಿ ಮಾಡಲಾಯಿತು.

ಅನಂತರ ಹುಝೂರ್ ಅನ್ವರ್(ಅತಬಅ) ಪುರುಷರ ಜಲ್ಸ ಸ್ಥಳಕ್ಕೆ ಆಗಮಿಸಿದರು ಮತ್ತು ಜುಮುಅ ಖುತುಬ ಪ್ರಾರಂಭಿಸಿದರು. ಅದರೊಂದಿಗೆಯೇ ಜಲ್ಸ ಸಾಲಾನ ಉದ್ಘಾಟಿಸಲಾಯಿತು.

ಜುಮುಅ ಖುತುಬ ಪುರುಷರ ಜಲ್ಸ ಸ್ಥಳದಲ್ಲಿ ಈ ಕೆಳಗೆ ನಮೂದಿಸಿದ ಭಾಷೆಗಳಲ್ಲಿ ಅನುವಾದಿಸುವ ವ್ಯವಸ್ಥೆ ಮಾಡಲಾಗಿತ್ತು. ಜರ್ಮನ್, ಇಂಗ್ಲೀಷ್, ಅರಬಿ, ಫ್ರಾಂಸಿಸ್, ಬೋಸ್‌ನಿಯನ್, ಬಂಗಾಳಿ, ತುರ್‌ಕಿಶ್, ರಷ್ಯಯನ್, ಬಲ್‌ಗ್ಯಾರಿಯನ್, ಅಲ್‌ಬಾನಿಯನ್, ಸ್ಪಾನಿಷ್.

ಲಜ್ನ (ಮಹಿಳಾ) ಜಲ್ಸ ಸ್ಥಳದಲ್ಲಿ ವೆಬ್ ಸ್ಟ್ರೀಮ್ ಮೂಲಕ ಎಲ್ಲಾ ಭಾಷೆಗಳಲ್ಲಿ ಅನುವಾದದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೇ ಪುರುಷರ ಜಲ್ಸ ಸ್ಥಳದಲ್ಲೂ ರೇಡಿಯೋ ಮತ್ತು ವೆಬ್‌ಸ್ಟ್ರೀಮ್ ಮೂಲಕ ಎಲ್ಲಾ ಭಾಷೆಗಳಲ್ಲಿ ಅನುವಾದದ ವ್ಯವಸ್ಥೆ ಮಾಡಲಾಗಿತ್ತು.

MTA ಮೂಲಕ ಇಲ್ಲಿಂದ ಒಂಭತ್ತು ಭಾಷೆಗಳಲ್ಲಿ ಇಂಗ್ಲೀಷ್, ಅರಬಿ, ಫ್ರೆಂಚ್, ಬಾಂಗ್ಲಾ, ಜರ್ಮನ್, ಇಂಡೋನೇಷಿಯನ್, ರಷಿಯನ್, ಸವಾಹೋಲಿ ಮತ್ತು ಸ್ಪಾನಿಷ್‌ನಲ್ಲಿ ಖುತುಬ ಜುಮುಅ ನೇರವಾಗಿ ಅನುವಾದವಾಗುವ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೇ ಯೋರ್‌ನಾ, ಹಾವುಸ್, ಕಟಕ್, ತಮಿಳು, ಮಲಯಾಳಂ ನಲ್ಲೂ ನೇರವಾಗಿ ಅನುವಾದದ ವ್ಯವಸ್ಥೆ ಮಾಡಲಾಗಿತ್ತು.

2 ಗಂಟೆ 10 ನಿಮಿಷಕ್ಕೆ ಹುಝೂರ್ ಅನ್ವರ್(ಅತಬಅ) ಜುಮುಅ ಖುತುಬ ಪ್ರಾರಂಭಿಸಿದರು. (ಜುಮುಅ ಖುತುಬದ ಸಂಪೂರ್ಣ ಲಿಖಿತ ಖುತುಬ ದಿನಾಂಕ 21 ಸೆಪ್ಟೆಂಬರ್ 2023 ರ ಸಂಚಿಕೆ ಸಂಖ್ಯೆ: 38 ರಲ್ಲಿ ಪ್ರಸಾರಗೊಂಡಿರುತ್ತದೆ. ಹುಝೂರ್ ಅನ್ವರ್(ಅತಬಅ) ಅವರ ಈ ಖುತುಬ ಜುಮುಅ 3 ಗಂಟೆ 13 ನಿಮಿಷದವರೆಗೆ ಜಾರಿಯಲ್ಲಿತ್ತು.

ಖುತುಬ ಜುಮುಅದ ನಂತರ ಹುಝೂರ್ ಅನ್ವರ್(ಅತಬಅ) ಜುಮುಅ ನಮಾಝ್‌ದೊಂದಿಗೆ ಅಸರ್ ನಮಾಝ್ ಜಮಾಗೊಳಿಸಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್(ಅತಬಅ) ತನ್ನ ವಸತಿ ಕಡೆ ಬರಬರುತ್ತಾ ರಸ್ತೆಯಲ್ಲಿ Humanity First Exhibition ನಲ್ಲಿ ಆಗಮಿಸಿದರು.

ಹುಝೂರ್ ಅನ್ವರ್(ಅತಬಅ) ಆ ಕಲುಷಿತ ನೀರಿನ ಬಕೆಟ್ ಬಗ್ಗೆ ಪ್ರಸ್ತಾಪಿಸಿದರು. ಆ ಬಗ್ಗೆ ಹುಝೂರ್ ಅನ್ವರ್(ಅತಬಅ) ಒಂದು ದಿವಸ ಮುಂಚೆಯೇ ನಿರ್ದೇಶನ ನೀಡಿದ್ದರು ಆಗ ಸಾಹಿಬ್ Humanity First ನ ಇನ್‌ಚಾರ್ಜ್ ಸಾಹಿಬ್ ಹೇಳಿದರು. ಆ ಬಕೆಟ್ ವಸ್ತುಪ್ರದರ್ಶನದ ಒಂದು ಭಾಗದಲ್ಲಿ ಇಡಲಾಗಿದೆ. ಇನ್‌ಚಾರ್ಜ್ ಸಾಹಿಬ್ ಮತ್ತು ಹೇಳಿದರು. ನಾವು ಈಗ Funk System ತಯಾರಿಸಿದ್ದೇವೆ. ಏಕೆಂದರೆ Disaster Relief ನಡುವೆಯೂ ಸಂಪರ್ಕ ಸಾಧಿಸಬಹುದಾಗಿದೆ. ಯಾವುದೇ ಕಾರಣದಿಂದ ಟೆಲಿಫೋನ್ ವ್ಯವಸ್ಥೆ ನಿಂತು ಹೋದರೆ ಆಗಲೂ ಈ ವ್ಯವಸ್ಥೆಯನ್ವಯ ಪರಸ್ಪರ ಸಂಪರ್ಕ ಸ್ಥಾಪಿಸಬಹುದು.

ಅನಂತರ ಹುಝೂರ್ ಅನ್ವರ್(ಅತಬಅ) ತಮ್ಮ ವಸತಿಯತ್ತ ತೆರಳಿದರು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.